International Journal of Kannada Research 2022; 8(1): 153-163




International Journal of Kannada Research
www.kannadajournal.com

**ISSN: 2454–5813**
IJKR 2022; 8(1): 153-163
© 2022 IJKR
www.kannadajournal.com
Received: 11-11-2021
Accepted: 15-12-2021

**ಪಿ. ಆರಡಿಮಲ್ಲಯ್ಯ ಕಟ್ಟೇರ**
ಸಹಾಯಕ ಪ್ರಾಧ್ಯಾಪಕರು ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜು ಶಿವಮೊಗ್ಗ, ಕರ್ನಾಟಕ, ಭಾರತ

ಡಾ. ಎಂ. ಮಂಜಣ್ಣ
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ದಾವಣಗೆರೆ ಜಿ.ಯು.ಆಯುರ್ವೇದಿಕ ಆಸ್ಪತ್ರೆ ಎದುರು ಆಂಜನೇಯ ಬಡಾವಣೆ ಎದುರು ದಾವಣಗೆರೆ, ಕರ್ನಾಟಕ, ಭಾರತ

**Corresponding Author:**
**ಪಿ. ಆರಡಿಮಲ್ಲಯ್ಯ ಕಟ್ಟೇರ**
ಸಹಾಯಕ ಪ್ರಾಧ್ಯಾಪಕರು ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜು ಶಿವಮೊಗ್ಗ, ಕರ್ನಾಟಕ, ಭಾರತ

# ಬುಡಕಟ್ಟುಗಳ ಅತಿಪಾವಿತ್ರ್ಯತೆ: ಮತಾಂತರ ಮತ್ತು ಮಧ್ಯಕಾಲೀನ ಬ್ರಾಹ್ಮಣ್ಯದ ಕೊಡುಗೆ

**ಪಿ. ಆರಡಿಮಲ್ಲಯ್ಯ ಕಟ್ಟೇರ, ಡಾ. ಎಂ. ಮಂಜಣ್ಣ**

**DOI:** https://doi.org/10.22271/24545813.2022.v8.i1c.1011

**ಪೀಠಿಕೆ**

ಭೂತಕಾಲದಿಂದ ಸಾಗಿ ಬಂದು ಭವಿಷ್ಯದೆಡೆಗೆ ಸಾಗುತ್ತಾ ದಿನಗಳನ್ನು ತುಂಬುವ ಯಾವ ಕ್ರಿಯೆಯೂ ಬಯಕೆಯೂ ಇರುವುದಿಲ್ಲ. ಹಾಗಾಗಿ ಪ್ರತಿದಿನವೂ ಅಸಹಜ ಪ್ರತ್ಯೇಕತೆಯನ್ನು ಪಡೆಯುತ್ತದೆ. ಪ್ರತಿದಿನದ ಬದುಕು ಹೊಸದಾಗಿ ಮೊದಲಾಗುತ್ತದೆ. ಸಾಗುವ ಕಾಲದ ಸಾಗರದಲ್ಲಿ ಇರುವ ಏಕಾಂಗಿ ದ್ವೀಪಗಳಂತೆ ಈ ದಿನಗಳು ಇರುತ್ತವೆ. – ಬೆಟ್ಟಿ ಫ್ರೀಡನ್

ಗೊಲ್ಲರಲ್ಲಿ ಎತ್ತಯ್ಯ ಮತ್ತು ಜುಂಜಪ್ಪ ಸಾಂಸ್ಕೃತಿಕ ವೀರರು. ಜುಂಜಪ್ಪನ ಮಹಾಕಥನದಲ್ಲಿ ಬಡಮೈಲ ಕಥನದ ಕೇಂದ್ರಬಿಂದು. ಕಥನವು ಪಶುಪಾಲನೆ ಮತ್ತು ಪಶುಪಾಲನೆಗೆ ಎದುರಾದ ಅಡ್ಡಿಗಳು ಮತ್ತು ಅವುಗಳ ನಿವಾರಣೆಯ ನಿರೂಪಣೆಯಾಗಿದೆ. ಎತ್ತಿಗೆ ಗೊಲ್ಲರು ಕೊಟ್ಟ ಪ್ರಾಧಾನ್ಯತೆಯು ಇದರಿಂದ ಸ್ಪಷ್ಟವಾಗುತ್ತದೆ. ಸಮುದಾಯಕ್ಕದು ಉತ್ಪಾದಕ ಸಂಕೇತವೂ ಹೌದು. ಒಂದು ವರ್ಗದ ಸಂಪತ್ತು ನಿರ್ಧಾರವಾಗುವ ಬಂಡವಾಳವಾಗಿಯೂ ಗುರ್ತಿಸಲ್ಪಡುತ್ತದೆ. ಅಂಥ ಸಂಪತ್ತಿನಿಂದಲೆ ಸಾಂಸ್ಕೃತಿಕವಾಗಿ ಕಾಡುಗೊಲ್ಲ ಸಮುದಾಯವು ಪ್ರಭುತ್ವವನ್ನು ಸಂಘರ್ಷದ ಮೂಲಕ ಎದುರಿಸುವ ಆರ್ಥಿಕಶಕ್ತಿಯಾಗಿದೆ. ಇದೇ ಕಾರಣಕ್ಕೆ ಕಾಡುಗೊಲ್ಲರ ಕುಲಚಿಹ್ನೆಯಾಗಿಯೂ ಸಾಧಿತವಾಗುತ್ತದೆ. ಜಗತ್ತಿನ ಬಹುತೇಕ ಬುಡಕಟ್ಟು ಸಮುದಾಯಗಳಿಗೆ ಎತ್ತು ಕುಲಚಿಹ್ನೆಯಾಗಿ ಗುರುತಿಸಲ್ಪಡುತ್ತದೆ. ಆದಿಮ ಸಮುದಾಯಗಳ ಕುಲಚಿಹ್ನೆಯಾದ ಎತ್ತಿನ ಮೂಲಕ ಸಮುದಾಯಗಳ ಆದಿಮತೆಯನ್ನು ಕಂಡು ಹಿಡಿಯಬಹುದು.

ಸಮುದಾಯ ಕಥನ ರಾಷ್ಟ್ರೀಯ ವ್ಯಾಪ್ತಿಯನ್ನು ಯಾವತ್ತೂ ಒಳಗೊಳ್ಳುವುದಿಲ್ಲ. ವಿಶೇಷವೆಂದರೆ ಜಾತಿಯಿರಲಿ ಕೆಲವೊಮ್ಮೆ ಕುಲದಾಚೆಯೂ ಅವು ದಾಟುವುದಿಲ್ಲ. ಜನಪದ ಮಹಾಕಥನವು ಸಮುದಾಯಪ್ರಜ್ಞೆಯನ್ನು ಆಳದಲ್ಲಿ ಇರಿಸಿಕೊಂಡಿರುತ್ತದೆ. "ಜನಪದ ಮಹಾಕಾವ್ಯಗಳು ಒಂದು ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವುದಕ್ಕಿಂತ ಹೆಚ್ಚಾಗಿ ಒಂದು ಜನಾಂಗಿಕ ಪ್ರಜ್ಞೆಯನ್ನು ಕಟ್ಟಿಕೊಡುವಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿವೆ. ಒಂದು ಜನಾಂಗದ ಪ್ರಜ್ಞಾವಂತ ಬಂಡಾಯ ಮನೋಧರ್ಮವುಳ್ಳ ವ್ಯಕ್ತಿ ವಿರೋಧಿಗಳೊಡನೆ ಹೋರಾಡಿ ಜಯ ಸಾದಿಸುತ್ತಾನೆ ಹುತಾತ್ಮನಾಗುತ್ತಾನೆ. ಜನಾಂಗದ ಜನರು ತಮ್ಮ ಸಾಂಸ್ಕೃತಿಕ ವೀರನೆಂದು ಕರೆದುಕೊಂಡು ವೀರ ಸಾಹಸಗಳನ್ನು ಕುರಿತು ಹಾಡುಕಟ್ಟಿ ಹೊಗಳುತ್ತಾರೆ"[1]. ಗೊಲ್ಲರ ಈರಗಾರರು ಮತ್ತು ಸಾಂಸ್ಕೃತಿಕ ನಾಯಕರೆಲ್ಲರೂ ಅನುಕ್ರಮವಾಗಿ ಪಾವಿತ್ರ್ಯತೆಗಾಗಿಯೇ ಹೋರಾಡಿ ಸತ್ತವರು. ಪಾವಿತ್ರ್ಯದ ವಿಷಯದಲ್ಲಿ ಬ್ರಾಹ್ಮಣ್ಯವನ್ನೂ ಮೀರಿಸುವ ವ್ಯಕ್ತಿತ್ವದವರು. ಈರಗಾರನೊಬ್ಬ "ಮಾದಿಗರವನು ಬಂದು ಮೆಟ್ಟು ತೂರಿಸುವ ನೆವದಲ್ಲಿ ಇವನ ಹೆಬ್ಬೆರಳು ಕತ್ತರಿಸಿ ಅಪವಿತ್ರಗೊಳಿಸಿದ್ದರಿಂದ ಎಂಜಲು ದೇಹ ಹೊತ್ತು ಬದುಕಲಾರೆ ಎಂದು ದಸಿ ಹಾಕಿಕೊಂಡು ಸಾಯುತ್ತಾನೆ. ಇದು ಕಾಡುಗೊಲ್ಲರು ಅಂಟು–ಮುಂಟಿನ ಬಗ್ಗೆ ಎಷ್ಟು ಸೂಕ್ಷ್ಮವಾಗಿ ನಡೆದುಕೊಳ್ಳುತ್ತಾರೆ ಎಂಬುದನ್ನು ತಿಳಿಸುತ್ತದೆ. ಎತ್ತಪ್ಪನೂ ಹೀಗೆ ಮುಟ್ಟಬಾರದವನು ಮುಟ್ಟಿ ದೇಹ ಎಂಜಲಾಯಿತು ಎಂದು ಸಾಯುತ್ತಾನೆ"[2]. ಹದಿನಾಲ್ಕು ಗಡಿಗೆಗಳಲ್ಲಿ ಹಾಲು ಕಾಯಿಸುತ್ತಿದ್ದಾಗ ಮುಸಲ್ಮಾನರ ದಂಡನ್ನು ನೋಡಿ, ಅವರು ಬಂದು ಹಾಲಿನ 'ಪವಿತ್ರತೆ'ಯನ್ನು ಕೆಡಿಸಿಬಿಟ್ಟಾರೆಂಬ ಆತಂಕದಿಂದ ಕುದಿಯುವ ಹಾಲನ್ನಷ್ಟೂ

[1] ಮುತ್ತಯ್ಯ. ಎಸ್.ಎಂ. ಲಿಖಿತ ಅಲಿಖಿತ. 2005, ಪುಟ.21

[2] ಶಿವಣ್ಣ ಮೀರಾಸಾಬಿಹಳ್ಳಿ. ಕಾಡುಗೊಲ್ಲ ಬುಡಕಟ್ಟು ವೀರರು. 2005, ಪುಟ.189

ಕುಡಿದು ತಾಪ ತಾಳಲಾರದೆ ಮಡುಗಿಗೆ ಬಿದ್ದು ಸತ್ತವರಿಗೇನೂ ಕಡಿಮೆಯಿಲ್ಲ. ಮುಸಲ್ಮಾನರ ವಿಷಯವಾಗಿ ಇಂಥ ಸಂದರ್ಭಗಳು ಅನೇಕ ಸಲ ಬಂದೊದಗುತ್ತದೆ. ತುರುಕರು ಬಂದು ನಮ್ಮನ್ನೆಲ್ಲಿ ಕೊಂದುಬಿಡುತ್ತಾರೊ ಎಂಬುದಕ್ಕಿಂತ ತುರುಕರು ನಮ್ಮ ದೇವರನ್ನು ಮುಟ್ಟಿ ಎಲ್ಲಿ ಬತಗೆಡಿಸಿ ಬಿಡುತ್ತಾರೋ ಎಂದು ದೇವರ ಪವಿತ್ರತೆಗಾಗಿ ಊರನ್ನು ಪ್ರಾಣವನ್ನು ಬಿಟ್ಟವರೆ ಬಹುಮಂದಿ. ಇಂಥದೇ ಒಂದು ಸಂದರ್ಭ ಜುಂಜಪ್ಪನನ್ನೂ ಮೀರಿಸಿದ ವ್ಯಕ್ತಿತ್ವವುಳ್ಳ ಪೂಜಾರಿ ಚಿತ್ತಯ್ಯನನ್ನು ಪರೀಕ್ಷಿಸಲು ಒಮ್ಮೆ ಜುಂಜಪ್ಪನೇ "ಬಳ್ಳಾರಿಯ ಕರಿತುರುಕನ ವೇಷ ಹಾಕ್ಕೊಂಡು ಎದುರಿಗೆ ಬಂದ. ದೂರದಿಂದಲೇ ನೋಡಿದ ಪೂಜಾರಿ ಚಿತ್ತಯ್ಯ ತುರುಕ ಎಲ್ಲಿ ತನ್ನ ಬತ ಕೆಡಿಸಿಬಿಡುತ್ತಾನೊ ಎಂದು ಹೆದರಿ ದಾರಿ ಬಿಟ್ಟು ಮೆಳೆಯ ಹಿಂದೆ ಅವಿತುಕೊಂಡ. ವೇಷದಲ್ಲಿದ್ದ ಜುಂಜಪ್ಪ ಚಿತ್ತಯ್ಯನತ್ತಲೇ ನುಗ್ಗಿದ. ಹೆದರಿದ ಚಿತ್ತಯ್ಯ ಗುಂಡು ತಗಂಡು ಹಾಕಲು ಹೋದಾಗ ಜುಂಜಪ್ಪ ನಿಜರೂಪ ತೋರಿಸುತ್ತಾನೆ"[3]. ಮುಸಲ್ಮಾನ ಬಂದು ಮುಟ್ಟಿದರೇ ಬತಗೆಡುವ ಜುಂಜಪ್ಪ ಮುಸಲ್ಮಾನನ ವೇಷಧರಿಸಿ ಮುಸಲ್ಮಾನನೇ ಆದಾಗ ಬತಗೆಡಲಿಲ್ಲವೇ ಎಂಬ ಪ್ರಶ್ನೆಗೆ ಉತ್ತರಗಳಿಲ್ಲ.

ಕಲಮರಹಳ್ಳಿಯವರು ತಮ್ಮ ಪ್ರಬಂಧದಲ್ಲಿ ಗೊಲ್ಲರ ಪಾವಿತ್ರ್ಯತೆಯ ಬಗ್ಗೆ ಹೀಗೆ ಬರೆಯುತ್ತಾರೆ. 'ಎತ್ತಪ್ಪ ಹಾಕಿಕೊಟ್ಟ ಅಂಟು ಮುಂಟಿನ ನಿಷೇಧಾತ್ಮಕ ಕ್ರಿಯೆಗಳು ಜುಂಜಪ್ಪನ ಮೂಲಕ ಮತ್ತಷ್ಟು ಜಟಿಲವಾಗುತ್ತವೆ. ತಮ್ಮೋಜಮ್ಮ ಪ್ರಭುತ್ವದ ನೆರಳಿನಲ್ಲಿರುವವಳಾದರೂ ಗೊಲ್ಲರ ಕಟ್ಟುಪಾಡುಗಳ ಮುಂದೆ ನಗಣ್ಯವಾಗುತ್ತಾಳೆ. ವೃತ್ತಿ ಪ್ರಾವಿಣ್ಯತೆಯ ಆಹಮಿಕೆಯೂ ಆಕೆಯಲ್ಲಿರುತ್ತದೆ. ಆ ಸ್ವಭಾವಕ್ಕೆ ಅಂಟು ಮುಂಟಿನ ತಿರುಗೇಟು ಕೊಡುತ್ತಾನೆ. ಜುಂಜಪ್ಪ ಮುಂದುವರಿಕೆಯಾಗಿ ಮಾದರಚೆನ್ನ ತೊಟ್ಟಿಲು ಮಾಡುವ ಸಂದರ್ಭದಲ್ಲಿ ಮನೆ ಮುಂದಿನ ಉಚ್ಚೆಲುಗಳನ್ನು ಮಡಿ ಮೈಲಿಗೆಯ ಪರಿಧಿಯೊಳಗೆ ತಂದುಕೊಳ್ಳಲು ಜುಂಜಪ್ಪ ಚೆನ್ನನ ಕಣ್ಣು ಕುರುಡಾಗುವಂತೆ ಮಾಡುವ ಸನ್ನಿವೇಶವನ್ನು ವಿಶೇಷವಾಗಿ ಗಮನಿಸುವಂಥಾದ್ದು'. ಕಲಮರಹಳ್ಳಿಯವರು ಹೇಳುವ 'ತಮ್ಮೋಜಮ್ಮನಿಗೆ ವೃತ್ತಿ ಪ್ರಾವಿಣ್ಯತೆಯ ಅಹಂ' ಇರುವ ಬಗ್ಗೆ ಕಥನಗಳಲ್ಲಿ ಎಲ್ಲಿಯೂ ಪ್ರಸ್ತಾಪವಿಲ್ಲ. ಇದ್ದರೂ ಅಹಂ ನೆಲೆಯಲ್ಲಿ ವಿವರಿಸುವಂತೆ ಸ್ವಾಭಿಮಾನದ ಸಂಕೇತವಾಗಿಯೂ ಗಮನಿಸಬಹುದಲ್ಲವೆ? 'ವಿಶೇಷವಾಗಿ ಗಮನಿಸುವಂಥಾದ್ದು' ಎಂಬ ಮಾತಿಗೆ ಒತ್ತು ಕೊಟ್ಟರೆ ಅದು ಜೀವವಿರೋಧಿ ನಿಲುವೇ ಆಗಿದೆ ಎಂಬುದು ತಿಳಿಯುತ್ತದೆ. ಇಂಥ ಜೀವವಿರೋಧಿ ಸನ್ನಿವೇಷಗಳನ್ನು ಅಧ್ಯಯನಕಾರರು ತುಂಬಾ ಎಚ್ಚರದಿಂದ ಬಿಡಿಸಿ ವ್ಯಾಖ್ಯಾನ ನೀಡಬೇಕು. ಕಲಮರಹಳ್ಳಿಯವರು ಆ ಪದ್ಧತಿಯನ್ನು ಒಪ್ಪಿ ಅಭಿಮಾನದಿಂದಲೇ ಬರೆಯುತ್ತಾರೆ.

ಶಿವಣ್ಣನವರು ನಿರೂಪಿಸುವ ಎತ್ತಪ್ಪ ಮತ್ತು ಜುಂಜಪ್ಪನವರ ಇಡೀ ವ್ಯಕ್ತಿತ್ವಗಳು ಅತಿ ಪವಿತ್ರತೆಯಲ್ಲಿ ಬ್ರಾಹ್ಮಣಶಾಹಿಯ ವಾರಸುದಾರರೆನ್ನುವಂತೆ ಚಿತ್ರಿಸಲಾಗಿದೆ. ಹುಟ್ಟಿನಿಂದ ಹಿಡಿದು ಸಾಯುವವರೆಗಿನ ಮತ್ತು ಸತ್ತ ಮೇಲಿನ ಪವಾಡಗಳಲ್ಲಿಯೂ ಅತಿ ಬ್ರಾಹ್ಮಣತನ ತಿಳಿಯುತ್ತದೆ. ಬ್ರಾಹ್ಮಣಧರ್ಮವು ಮಹಿಳೆಯರಿಗೆ ವಿಧಿಸಿದ್ದಕ್ಕಿಂತ ಹೆಚ್ಚಾಗಿ ಇಬ್ಬರೂ ಮಹಿಳೆಯರನ್ನು ಕುರಿತಂತೆ ಮಡಿ ಮೈಲಿಗೆಯನ್ನು ಅನುಸರಿಸುತ್ತಾರೆ. ಶಿವಣ್ಣನವರಿಗಿದು 'ಸಾಂಸ್ಕೃತಿಕ ಶ್ರೇಷ್ಠತೆ'ಯಾಗಿ ಕಾಣುತ್ತದೆಯೆ ವಿನಃ ಬ್ರಾಹ್ಮಣ ಧರ್ಮದ ಕಟ್ಟಾಗಿ ಕಾಣುವುದಿಲ್ಲ. "ಯಾವ ನಿಯಂತ್ರಣವೂ ಇಲ್ಲದ ಸಮಾಜಕ್ಕೆ ಅಗತ್ಯವಾದ ಧಾರ್ಮಿಕ ಸಂವಿಧಾನವನ್ನು ರೂಪಿಸುವುದರ ಮೂಲಕ ಎತ್ತಯ್ಯ ಆ ಜನಾಂಗಕ್ಕೆ ಕುಲ–ನೆಲೆ–ಸಂಸ್ಕೃತಿ ಕೊಟ್ಟ ಮಹಾನ್ ವ್ಯಕ್ತಿಯಾಗಿ ಕಾಣುತ್ತಾನೆ"[4] ಎಂದು ಹೆಮ್ಮೆಯಿಂದ ಬರೆಯುತ್ತಾರೆ. ಗೊಲ್ಲರ ಕಥನಗಳಲ್ಲಿ ಗೊಲ್ಲರು ಗೊಲ್ಲರಲ್ಲಿಯೇ ಜಗಳಗಳು ಹೆಚ್ಚಾಗಿ ನಡೆಯುತ್ತವೆ. ಮ್ಯಾಸಬೇಡರು ಆಗಾಗ ಬಂದು ಹೋಗುತ್ತಾರೆ. ಶಿವಣ್ಣನವರಿಗೆ ಬದ್ಧವೈರಿಗಳಾಗಿ ಕಾಣುವುದು ಮ್ಯಾಸಬೇಡರು ಮಾತ್ರ. ಕಂಬೇರು ಗೊಲ್ಲರ ಪರವಾಗಿ ಮೃದು ಧೋರಣೆ ತಾಳುತ್ತಾರೆ. 'ಎತ್ತಪ್ಪನ ಸರಳ, ನೇರ, ಮುಗ್ದ ನಡವಳಿಕೆಯ ಚಿತ್ರ ನಮ್ಮ ಮನಸ್ಸನ್ನು ಆವರಿಸುತ್ತದೆ' ಎಂದು ಶೋಕಪಡುತ್ತಾರೆ.

ಕಾಡುಗೊಲ್ಲರ ಬಗ್ಗೆ, ಜುಂಜಪ್ಪನ ಮಹಿಮಾತಿಶಯಗಳ ಬಗ್ಗೆ ಬರೆಯುವಾಗ ಶಿವಣ್ಣನವರು ನೆಲದ ಮೇಲೆ ನಿಲ್ಲುವುದಿಲ್ಲ. ಲೌಕಿಕತೆಯನ್ನು ಸಂಪೂರ್ಣ ನಿರ್ಲಕ್ಷಿಸಿ ಅಲೌಕಿಕ ಸಂಚಾರಿಗಳಾಗುತ್ತಾರೆ ಎಂದು ಅರ್ಥ. ಕಥನಗಳು ನಿರೂಪಿಸುವಂತೆ ಜುಂಜಪ್ಪ ಮಡಿವಂತ. ಇದರೊಂದಿಗೆ ಆತ ಮಹಾಗರ್ವಿಷ್ಠನೆಂಬುದು ಅನೇಕ ಪ್ರಸಂಗಗಳಲ್ಲಿ ಸಾಬೀತಾಗುತ್ತದೆ. ಜುಂಜಪ್ಪನ ಬಗ್ಗೆ ಬಂದ ಸಾಹಿತ್ಯವನ್ನು ಪುನರಾವಲೋಕನ ಮಾಡಿದ ಶಿವಣ್ಣನವರು ಜುಂಜಪ್ಪನನ್ನು ಲೌಕಿಕ ವ್ಯಕ್ತಿಯಂತೆ ಚಿತ್ರಿಸುವುದನ್ನು ಬಲವಾಗಿಯೆ ಖಂಡಿಸುತ್ತಾರೆ. ದುರಂತವೆಂದರೆ ಜುಂಜಪ್ಪ ಕಾಡುಗೊಲ್ಲರ ಚಾರಿತ್ರಿಕ ಸಾಂಸ್ಕೃತಿಕ ನಾಯಕ ಎಂದು ಅವರೇ ಬರೆಯುತ್ತಾರೆ. ಯಾಕೆ ಈ ವೈರುಧ್ಯ? ಜುಂಜಪ್ಪನು ರಾಜ್ಯ ಆಳ್ವಿಕೆ ಮಾಡಿದನು ಎಂದು ಹೆಮ್ಮೆಯಿಂದ ಹೇಳುವ ಅವರೇ ಬೇರೆಯವರು ಅದನ್ನೆ ಬರೆದಾಗ 'ಊರಿನ ಒಳಗೆ ಕಾಲಿಡದ ಜುಂಜಪ್ಪ ಏಳುವರ್ಷ ಆಳ್ವಿಕೆ ಮಾಡಿದನೆಂದು ಬರೆದಿದ್ದಾರೆ. ಆಗ ಜುಂಜಪ್ಪನಿಗೆ ಮೈಲಿಗೆಯಾಗಲಿಲ್ಲವೇ' ಎಂದು ಸಿಟ್ಟಾಗುತ್ತಾರೆ. ಅಂದರೆ ಶಿವಣ್ಣನವರು ಜುಂಜಪ್ಪನ ಬಗ್ಗೆ ಏನೇ ಬರೆದರೂ ನಡೆಯುತ್ತದೆ, ಅದೇ ಸತ್ಯ. ಆದರೆ ಬೇರೆಯವರಾರೂ ಬರೆಯಬಾರದು. ಜನಗಳ ಮಧ್ಯೆ ಜುಂಜಪ್ಪ ಹಾವು ಚೇಳಿನ ದೇವರು ಮತ್ತು ಹಾವು ಚೇಳು ಕಡಿದಾಗ ವಿಷ ಇಳಿಸುವ ಸಾಮಾನ್ಯ ವ್ಯಕ್ತಿಯೇ. ಮೇ ತಿಂಗಳಲ್ಲಿ ಉಜ್ಜಯಿನಿ ಜಾತ್ರೆಯಲ್ಲಿ ಜುಂಜಪ್ಪನ ಪಂಥದವರೂ ಬರುತ್ತಾರೆಂದು ಶಿವಣ್ಣನವರು ಪ್ರಸ್ತಾಪವನ್ನೇ ಮಾಡಿಲ್ಲ. ಅವರನ್ನು ಸಂದರ್ಶಿಸಿ ನಿಮ್ಮ ಜುಂಜಪ್ಪ ಅಸಾಮಾನ್ಯ ಪುರುಷ ಹೀಗೆಲ್ಲಾ ಮಾಡಿದ್ದಾನೆಂದು ಶಿವಣ್ಣ ಎಂಬ ವಿದ್ವಾಂಸರು ಬರೆದಿದ್ದಾರೆ ಎಂದೆ. ಅದಕಾತ 'ಹೇ ಬಿಡು ಉಡ್ಗ. ಜುಂಜಪ್ಪ ಅಷ್ಟು ಕೆಟ್ಟವನಲ್ಲ. ಈ ಇದ್ವಾಂಸಗೆ ಗೊತ್ತಿಲ್ಲ. ಜುಂಜಪ್ಪ ಒಬ್ಬ ನಮ್ಮಂತವನೆ. ಅವನಿಗೆ ಮದುವೆ ಹೆಣ್ಣು ಗೊತ್ತು ಮಾಡಿದಾಗ ಊರು ಬಿಟ್ಟು ಕಾನು ಸೇರಿ ವೈದ್ಯತನ ಕಲಿತ. ಮತ್ತೆ ಊರಿಗೆ ಬಂದು ದನ ಕಾಯ್ತಾ ವೈದ್ಯತನ ಮಾಡಿದ. ಎಲ್ಲರತ್ರಾನೂ ಮುಟ್ಟಿಸ್ಕೊತ್ತಿದ್ದ. ಎಲ್ಲರನ್ನೂ ಮುಟ್ತುತ್ತಿದ್ದ. ಆತನ ಎಲ್ಲ ಸರಂಜಾಮೂ ತಲೆ ಮೇಲೆ ವರುತ್ತಿದ್ದದ್ದೇ ಮಾದಿಗರವನು. ಇಂಗೆಲ್ಲಾ ಯಾಕೆ ಬರಿತಾರೆ ಯಾರು ಸ್ವಾಮಿ ಆ ಶಿವಣ್ಣ ತೆಪ್ಪು ಬರದಾನೆ' ಎಂದರು.

ನನಗೆ ಆಶ್ಚರ್ಯವಾಗಿ 'ಹೌದು ನೀವ್ಯಾಕೆ ಉಜ್ಜಯಿನಿ ಸಿದ್ದೇಶನಿಗೆ ಬಂದಿದ್ದೀರಿ' ಎಂದೆ. ಏನ್ ಉಡ್ಗ ಇಂಗಂತಿಯ, ನಮ್ಮವನಾದ ಜುಂಜಪ್ಪನಿಗೆ ಮಾದಿಗರವನು ಏಟು ಸ್ಯಾವೆ ಮಾಡವ್ನೆ. ಅದುಕ್ಕೆ ಮಾದಿಗರವನಾದ ಸಿದ್ದೇಸನಿಗೆ ನಾವು ಸ್ಯಾವೆ ಮಾಡೋದು ಬೇಡವಾ. ರುಣ ತೀರಿಸಬೇಕು. ಅವನು ನಮ್ಮವನು ಇವನು ನಮ್ಮವನು ಎಂದು ಭಾಗ ಮಾಡೋಕೆ ನಾವೇನು ನಿಮ್ಮಂಗೆ ಓದಿದಿವಾ. ಅಂಗೆಲ್ಲಾ ಮಾಡಬಾರದು ಕಣಪ್ಪಾ ಎಂದರು. ಅಲ್ಲಾ ಸಿದ್ದೇಶ ಲಿಂಗಾಯತರು ಅಂತಾರೆ ಅಂದಿದಕ್ಕೆ, 'ಅಯ್ಯೋ ಬಿಡಪ್ಪಾ ಅವ್ರು ನಾವು ಒಂದೇ, ಏನೋ ತಿಳ್ಕೊತಾರೆ ಅಂತ ಕಷ್ಟಪಟ್ಟು

[3] ಅದೇ. ಪುಟ.428

[4] ಅದೇ. ಪುಟ.276–277

ಓದಿಸ್ತೀವಿ. ಓದಿರೋರು ಯಾಕಪ್ಪ ಇಂಗೆ ದೊಡ್ಡ ಮನುಸ್ಯರ ಬಗ್ಗೆ ಅಪಾದ ಬರಿತಿರಿ. ನಿಮ್ಮುನ್ನ ಓದಿಸದಿದ್ದಿರೇನೆ ಪಾಡಿತ್ತು ಅನ್ಸತ್ತೆ' ಎಂದು ನಿಟ್ಟುಸುರು ಬಿಟ್ಟರು. ಚಿಕ್ಕೀರಜ್ಜನ ಮಾತಿನಲ್ಲಿ ವಿದ್ವಾಂಸರುಗಳ ತಪ್ಪಿನೊಂದಿಗೆ ಅಧ್ಯಯನಗಳು ನಡೆಯಬೇಕಾದ ದಾರಿಯೂ ಮತ್ತು ಅನೇಕ ಸತ್ಯಗಳು ಅಡಗಿವೆ. ಅನಕ್ಷರಸ್ಥ ಸಮುದಾಯ ಅಕ್ಷರಲೋಕದ ಬಗ್ಗೆ ತಾಳಿರುವ ನಿಲುವು ಹಾಗೂ ವಿದ್ವಾಂಸರು ಅನಕ್ಷರಲೋಕವನ್ನು ಬಳಸಿಕೊಂಡು ಮಾಡುತ್ತಿರುವ ಅನರ್ಥದ ಬಗ್ಗೆಯೂ ಎಚ್ಚೆತ್ತುಕೊಳ್ಳುವ ಪುನರಾವಲೋಕನವಶ್ಯಕತೆಯ ಬಗ್ಗೆಯೂ ಈ ಮಾತು ಉಲ್ಲೇಖಾರ್ಹ. ಒಂದು ಹೋಲಿಕೆಯನ್ನಷ್ಟೇ ಕೊಡೋದಾದರೆ ಗೊಲ್ಲರು ಅತ್ತಿಯ ಮರದ ಕೊನೆಯಿಲ್ಲದೇ ಯಾವುದೇ ಶುಭಕಾರ್ಯವನ್ನು ಮಾಡಲಾರರು. ಹಾಗೆಯೇ "ಹೊಲೆಯ ಮಾಸ್ತೀಕರು ಅತ್ತಿಮರ ಪೂಜಿಸುವವರಾಗಿದ್ದಾರೆ. ಈ ಅತ್ತಿಯ ಮರದಿಂದಲೇ ಕಂಚಿಯ ಸಮೀಪದ ಬೆಟ್ಟವೊಂದಕ್ಕೆ 'ಹಸ್ತಿಗಿರಿ' ಎಂತಲೆ ಕರೆಯುತ್ತಾರೆ. ಕುತೂಹಲದ ವಿಚಾರವೆಂದರೆ ಈ ಹಸ್ತಿಗಿರಿ ವೈಷ್ಣವ ಮತಸ್ಥದವರಾಗಿದ್ದು ಹೊಲೆಯ ಮಾಸ್ತೀಕರು ಕೂಡ ವೈಷ್ಣವರೇ ಆಗಿದ್ದಾರೆನ್ನುವುದು"[5]. ಗೊಲ್ಲ ಬೆಡಗುಗಳಿಗೂ ಆಚರಣೆಗಳಿಗೂ ಹೊಲೆಯ ಮಾಸ್ತೀಕರಿಗೂ ಮ್ಯಾಸಬೇಡರಿಗೂ ಹಲವು ವಿಧಗಳಲ್ಲಿ ಸಾಮ್ಯತೆಯಿದೆ.

'ಬಾಯಾರಿಕೆಯಾಗಿ ನೀರು ಕುಡಿಯಲು ಎತ್ತಯ್ಯನ ದೋಣಿಯಲ್ಲಿನ ನೀರು ಕುಡಿಯಲು ಹೋದ ಮಹಿಳೆಯನ್ನು ನೀರನ್ನು ಮುಟ್ಟಿ ಮೈಲಿಗೆ ಮಾಡುತ್ತಾಳೆ ಎಂದು ಎತ್ತಯ್ಯ ಝಾಡಿಸಿ ವದ್ದದ್ದರಿಂದ ಕೆಳಗೆ ಬಿದ್ದು ಸತ್ತಳು' ಎಂದು ಕಥನಗಾರರು ಹೇಳಿದ್ದನ್ನು ಶಿವಣ್ಣನವರು ಅತ್ಯಂತ ಜಾಣ್ಮೆಯಿಂದ ಎತ್ತಯ್ಯನ ಮೇಲಿನ ಅಪವಾದದಿಂದ ಜಾರಿಸುವ ಪ್ರಯತ್ನ ಮಾಡುತ್ತಾರೆ. ಶಿವಣ್ಣನವರು ಕೊಡುವ ಕಾರಣ "ಸು. ಹದಿನೈದು ಅಡಿ ಎತ್ತರದಲ್ಲಿರುವ ದೋಣಿಯನ್ನು ಹತ್ತುವಾಗ ಹೆಂಗಸು ಕಾಲುಜಾರಿ ಬಿದ್ದಿ ಸತ್ತಿರುವ ಸಾಧ್ಯತೆಯೂ ಇರಬಹುದೆಂದು ಇಲ್ಲಿ ಊಹಿಸಬಹುದು"[6]. ಗೊಲ್ಲ ಸಮುದಾಯಕ್ಕೆ ಅಪಚಾರವಾಗುವ ಕಡೆಯಲ್ಲೆಲ್ಲಾ ಅದನ್ನು ವಿಸ್ತೃತವಾಗಿ ಅಡಿಟಿಪ್ಪಣಿಗಳಲ್ಲಿ ಪುಟಗಟ್ಟಲೆ ವಿವರಣೆ ಕೊಟ್ಟು ಮರೆಮಾಚುವ ಶಿವಣ್ಣನವರು ಗೊಲ್ಲರ ಕೆಟ್ಟ ಹಾಗೂ ಬೇಡರ ಒಳ್ಳೆಯ ಗುಣಗಳ ಪ್ರಸ್ತಾಪ ಬಂದಾಗ ತಣ್ಣಗೆ ಕುರುಡಾಗಿ ಮುಂದುವರಿಯುತ್ತಾರೆ. ಇಂಥ ಎತ್ತಪ್ಪ ಬೇಡರಿಂದ ಸಾಯುವುದು ವಿದ್ವಾಂಸದ್ವಯರಿಗೆ ಸಹಿಸಲಾರದ ಪ್ರಸಂಗವಾಗಿದೆ. 'ಯಕಶ್ಚಿತ್ ಒಬ್ಬ ಬೇಡರವನು ತಲೆ ಕತ್ತರಿಸಿದನೆಂದರೆ ಹೇಗೆ? ಎಂದು ಶಿವಣ್ಣನವರು ಬರೆದರೆ 'ಎತ್ತಪ್ಪ ಗೊಲ್ಲರ ಬಹುದೊಡ್ಡ ಸಾಂಸ್ಕೃತಿಕ ನಾಯಕ ಹಾಗಾಗಿ ಸಾಮಾನ್ಯ ಬೇಡರಿಂದ ತಲೆ ಒಡೆಸಿಕೊಂಡು ಸತ್ತನೆಂದು ಒಪ್ಪಿಕೊಳ್ಳುವುದು ಕಷ್ಟ"[7] ಎಂದು ಕಲಮರಹಳ್ಳಿಯವರು ಬರೆಯುತ್ತಾರೆ.

ಕಳುವೋರಳ್ಳಿಯನ್ನು ಕುರಿತು ಬರೆಯುವಾಗ ಇದು ಸಂಪೂರ್ಣ ಪ್ರಾಚೀನವಾದ ಗೊಲ್ಲರ ನೆಲೆಯಾಗಿದ್ದು ಅಲ್ಲಿ ಹಿಂದಿನಿಂದಲೂ ಗೊಲ್ಲರೇ ವಾಸಿಸುತ್ತಾರೆ ಎಂದು ಬರೆಯುತ್ತಾರೆ. ಆ ಗ್ರಾಮಕ್ಕೆ ಕಳುವೋರಳ್ಳಿ ಎಂದು ಹೆಸರು ಬರಲು ಕಾರಣ ಹುಡುಕಲು ಶಿವಣ್ಣನವರು ತಿಪ್ಪರಲಾಗ ಹಾಕಿ ವಾಸ್ತವಸ್ಥಿತಿಯನ್ನು ಮುಚ್ಚಲು ಪ್ರಯತ್ನಿಸುತ್ತಾರೆ. "ಈ ಹಳ್ಳಿ ಗಿಡಗಂಟೆಗಳಲ್ಲಿ ಮುಚ್ಚಿ ಹೋಗಿದ್ದು ಸರ್ಕಾರದ ಗಮನಕ್ಕೆ ಬಂದಿರಲಿಲ್ಲವಂತೆ, ಅವರ ಅರ್ಥದಲ್ಲಿ ಕಾಣೆಯಾದ ಹಳ್ಳಿ ಕಳುವುವೋದಹಳ್ಳಿ ಹಳ್ಳಿಯಾದುದು. ಕಳುವು ಹೋದಹಳ್ಳಿ ಅಥವಾ ಕಳುವೋರಳ್ಳಿಯಾಗಿದೆ"[8] ಎಂದು ವಿವರಿಸುವ ಶಿವಣ್ಣನವರು ಅವರ ವಾದದ ಬುಡಕ್ಕೆ ಅವರೇ ಬೆಂಕಿಹಚ್ಚಿಕೊಂಡು ಇದಕ್ಕಿದ್ದಂತೆ 'ಇಲ್ಲಿಯ ಬ್ಯಾಡರು ಕಳುವು ಮಾಡುತ್ತಿದ್ದುದರಿಂದ ಈ ಊರಿಗೆ ಕಳುವೋರಳ್ಳಿ ಎಂದು ಹೆಸರು ಬಂದಿದೆ ಎನ್ನುತ್ತಾರೆ'. ಅದೇ ಊರಿನ ಅತ್ಯಂತ ಶ್ರೇಷ್ಠ ಸಂಸ್ಕೃತಿ ಹೊಂದಿದ, ವಿಶೇಷವೆಂದರೆ ಜುಂಜಪ್ಪ ಹುಟ್ಟಿ ಬೆಳೆದ ಊರಿಗೆ ಹೆಸರು ಬಂದಿದ್ದು ಬೇಡರಿಂದ!

ಮುತ್ತಿನ ಶೆಟ್ಟಿ ಎಂಬುವವನಿಗೆ ಬುಡಮ್ಯೆಲನ ಮೇಲೆ ಮೋಹ ಉಂಟಾಗುವುದು ಸಹಜವೂ ಕೂಡ. ಸಂಚಾರ ವಿಚಾರಕ್ಕಾಗಿಯೂ ಮುತ್ತಿನಶೆಟ್ಟಿಯ ಹಂಬಲ ಸಹಜವೇ ಆಗಿದೆ. ಅದಕ್ಕಾತ ಬಡಮ್ಯೆಲನನ್ನು ದುಡ್ಡಿಗೆ ಕೊಡುತ್ತೀರಾ ಎಂದು ಕೇಳುವುದು ಅದ್ಯಾವ ತಪ್ಪು? ಇದನ್ನು ತಿಳಿದು ಜುಂಜಪ್ಪ ಬುದ್ದಿ ಸ್ಥಿಮಿತ ಇಲ್ಲದವನಂತೆ 'ಎಲಾ ದಗಡಿ ಮಗನೆ, ಎಲಾ ತೊತ್ತಿನ ಮಗನೆ ಬಡಮ್ಯೆಲನನ್ನೇ ಕೊಡು ಅಂತ ಕೇಳ್ತಿಯಲ್ಲೋ. ನಿನ್ನ ಮ್ಯೆಯಾಗೆ ಅದೆಷ್ಟು ನೆಣ ಐತೆ, ದಟ್ಯಾಗೆ ಅದೆಷ್ಟು ದುಡ್ಡು ಐದಾವೋ' ಎಂದು ಗದರಿಸುತ್ತಾನೆ. ವಿಶೇಷವೆಂದರೆ ಶಿವಣ್ಣನವರು ಇದನ್ನು ವಿಶ್ಲೇಷಣೆ ಮಾಡದೆ ತುಂಬು ಅಭಿಮಾನದಿಂದ ಒಪ್ಪಿಕೊಂಡು ಮುಂದುವರಿಯುತ್ತಾರೆ. ಜುಂಜಪ್ಪ ಯಾವಾಗಲೂ ಮನೆ ಸೇರದೆ ಕಾಡಲ್ಲಿಯೇ ಇದ್ದು ಬದುಕುತ್ತಾನೆ. ಜನರ ಮದ್ಯೆ ಇದ್ದು ಅವರ ನಾಡಿಮಿಡಿತ ಅರಿಯದ, ಜನರು ಮುಟ್ಟಿದರೆಲ್ಲಿ ಮೈಲಿಗೆಯಾಗುತ್ತೇನೋ ಎಂದು ಕೊರಗುವ ವ್ಯಕ್ತಿ ಸಹಜವಾಗಿಯೇ ಜನವಿರೋಧಿ ಮೌಲ್ಯಗಳನ್ನು ಪ್ರತಿಪಾದಿಸುವವನಾಗುತ್ತಾನೆ. ಬುದ್ಧಿಗಿಂತ ದೈಹಿಕ ಬಲವನ್ನು ನಂಬುತ್ತಾನೆ. ಹಠಮಾರಿಯಾಗಿ ಮತ್ತೊಬ್ಬರ ಸಲಹೆಗಳನ್ನು ಪರಾಮರ್ಶಿಸದೆ ನಿರಾಕರಿಸುತ್ತಾನೆ. "ತಮ್ಮ ಮನೆ ಮಾರುಗಳನ್ನು ತೊರೆದು ದೂರದ ದೇಶಗಳಿಗೆ ವಲಸೆ ಹೋಗುವ ಸಾಹಸಗಾರರು ಸಾಮಾನ್ಯವಾಗಿ ತಮ್ಮ ಜನಾಂಗದ ಅತ್ಯುತ್ತಮ ವ್ಯಕ್ತಿಗಳಾಗಿರುವುದಿಲ್ಲ. ಅವರು ಸಾಂಸ್ಕೃತಿಕ ಸಾಧನೆಗಳಿಗಿಂತ ಹೆಚ್ಚಾಗಿ ದೇಹದಾರ್ಢ್ಯ ಮತ್ತು ಮೊಂಡು ಧೈರ್ಯವುಳ್ಳ ಕೆಳವರ್ಗದ ಜನರಾಗಿರುತ್ತಾರೆ"[9]. ಇವೆಲ್ಲಾ ಗುಣಗಳನ್ನೂ ಎತ್ತಪ್ಪ ಮತ್ತು ಜುಂಜಪ್ಪನಲ್ಲಿ ಕಾಣಲು ಕಥನಗಳು ಆಧಾರಗಳನ್ನು ಒದಗಿಸುತ್ತವೆ.

ಕಂಬೇರರನ್ನು ಸುಟ್ಟು ಬೂದಿ ಮಾಡಿದ ಜುಂಜಪ್ಪ (ಮಾರಕ್ಕ ಒಬ್ಬಳನ್ನು ಬಿಟ್ಟು ಹಿರಿಯರು, ಕಿರಿಯರು, ಗಂಡಸರು, ಹೆಂಗಸರೆನ್ನದೆ) ಗಂಡನನ್ನು ಕಳಕೊಂಡ ಮಾರಕ್ಕ ಅಳುತ್ತಾ ನಿಂತಾಗ ತಂಗಿಗೆ ವಾಗ್ದಾನ ಕೊಡುತ್ತಾನೆ. "ಕೊಂಬೆಗೆ ಕೊಂಬೆಚ್ಚಾಗಲಿ, ರೆಂಬೆಗೆ ರೆಂಬೆ ಬೆಳಿಯಾಲಿ. ನಿಮ್ಮಣ್ಣೆಚ್ಚಲಿ ನನ ಮಗಳೆ ಗಂಡು ಬೆಳೀಲಿ ತಾಯಿ. ಕುಂಬಳ ಕುಡಿಯಿಕ್ಕಿದಂಗೆ ನಿಮ್ಮ ಸಂತಾನೆಚ್ಚಾಲಿ. ನಮ್ಮ ಮನೆಗಿನ್ನ ನಿಮ್ಮ ಮನೆ ಒಂದು ಹೆಚ್ಚಿಗಿರಲಿ ನನ್ನ ಮೊದಲ ಪೂಜೆ ನಿಮ್ಮಿಂದಾಗಲಿ"[10]ಎಂದು ಆಶೀರ್ವಾದ ಮಾಡುತ್ತಾನೆ. ವಂಶವನ್ನೆ ನಿರ್ವಂಶ ಮಾಡಿದ ವ್ಯಕ್ತಿಯೊಬ್ಬ, ತಾನಿನ್ನೂ ತಾಯಿಯಾಗುವ ಮುಂಚೆಯೆ ಗಂಡನನ್ನು ಕಳೆದುಕೊಂಡ ಸಂದರ್ಭದಲ್ಲಿ ಮೇಲಿನಂತೆ ಆಶೀರ್ವದಿಸುತ್ತಾನೆ. ಮಾರಕ್ಕನಿಗೆ ಮಕ್ಕಳೇ ಇಲ್ಲ. ಹಟ್ಟಿ ಸುಟ್ಟು ಬೂದಿಯಾಗಿದೆ. ಗಂಡ ಸತ್ತಿದ್ದಾನೆ.

---

[5] ಲಕ್ಷ್ಮೀಪತಿ ಕೋಲಾರ. ಮಾಸ್ತೀಕರ ಸಂಸ್ಕೃತಿ. 1993, ಪುಟ.74

[6] ಶಿವಣ್ಣ ಮೀರಾಸಾಬಿಹಳ್ಳಿ. ಕಾಡುಗೊಲ್ಲ ಬುಡಕಟ್ಟು ವೀರರು. 2005, ಪುಟ.263

[7] ಮಲ್ಲಿಕಾರ್ಜುನ ಕಲಮರಹಳ್ಳಿ. ಕರ್ನಾಟಕದ ಕಾಡುಗೊಲ್ಲರ ಜನಪದ ಕಾವ್ಯಗಳಲ್ಲಿ ಸಾಂಸ್ಕೃತಿಕ ಸಂಘರ್ಷ. ಪುಟ. 88

[8] ಶಿವಣ್ಣ ಮೀರಾಸಾಬಿಹಳ್ಳಿ. ಕಾಡುಗೊಲ್ಲ ಬುಡಕಟ್ಟು ವೀರರು. 2005, ಪುಟ.332, ಅಡಿಟಿಪ್ಪಣಿಯಲ್ಲಿ

[9] ಅನು: ಭಗವಾನ್. ಕೆ.ಎಸ್. ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ.2010, ಪುಟ.31

[10] ಶಿವಣ್ಣ ಮೀರಾಸಾಬಿಹಳ್ಳಿ. ಕಾಡುಗೊಲ್ಲ ಬುಡಕಟ್ಟು ವೀರರು. 2005, ಪುಟ.423

ನಿನ್ನ ವಂಶ ಹೆಚ್ಚಲಿ ಎಂದರೆ, ಜುಂಜಪ್ಪನ ಆಶೀರ್ವಾದ ಸುಳ್ಳಾಗಬಾರದೆಂದರೆ ಮಾರಕ್ಕ ತುಳಿಯಬೇಕಾದ ಹಾದಿಯು ಪವಾಡ ಪುರುಷೋತ್ತಮ ಜುಂಜಪ್ಪನಿಗೆ ತಿಳಿಯಬೇಕಾಗುತ್ತದೆ. ಶಿವಣ್ಣನವರು ಇದನ್ನು ಸಂಕ್ಷಿಪ್ತವಾಗಿಯಾದರೂ ವಿಶ್ಲೇಷಣೆ ಮಾಡದೆ ಜುಂಜಪ್ಪನನ್ನು ಆರಾಧಿಸುವತ್ತ ಗಮನ ಹರಿಸುತ್ತಾರೆ.

ಅಜ್ಜೇರ ಕಾಟನೆಂಬುವನು ಜುಂಜಪ್ಪನಿಗೆ ಸಂತೃಪ್ತಿಯಾಗುವಂತೆ ಪೂಜೆಮಾಡಿದಾಗ ಜುಂಜಪ್ಪ ಪ್ರತ್ಯಕ್ಷಗೊಂಡು ನಿನಗೆ ಬೇಕಾದ ವರ ಕೇಳು ಎನ್ನುತ್ತಾನೆ. ಆಗ ಕಾಟನು ನನಗೇನು ಸಿರಿಸಂಪತ್ತು ಬೇಡ ಸೂರ್ಯಚಂದ್ರ ಇರೋವರೆಗೂ ನಿನ್ನ ಪೂಜೆ ಮಾಡೊ ಹಾಗೂ ನಿನ್ನ ವಂಶಸ್ಥರು ಪೂಜೆಮಾಡದಂತೆ ವರಕೊಡು ಎಂದು ಕೇಳುತ್ತಾನೆ. ಅದಕ್ಕೆ ಸಿಟ್ಟಿಗೆದ್ದ ಜುಂಜಪ್ಪ ಕಾಟನನ್ನು ಗುದ್ದಿ ಕೊಲೆ ಮಾಡುತ್ತಾನೆ. ಇದು ಸಾಂಸ್ಕೃತಿಕ ನಾಯಕನೆನಿಸಿಕೊಳ್ಳುವ ವ್ಯಕ್ತಿಗೆ ಶೋಭೆ ತರುವಂಥಹದ್ದು ಎಂದು ಸಾಮಾನ್ಯನಿಗೂ ಅನಿಸದು. "ಊರುಗೊಲ್ಲರು ಬಹುಮಟ್ಟಿಗೆ ವೈಷ್ಣವರು, ಇವರ ಮಾತೃಭಾಷೆ ತೆಲುಗು. ಹೀಗಾಗಿ ಮೂಲತಃ ಶೈವರೂ ಕನ್ನಡ ಭಾಷೆಯುಳ್ಳವರೂ ಆದ ಕಾಡುಗೊಲ್ಲರಿಗೂ ಇವರಿಗೂ ಯಾವುದೇ ಸಂಬಂಧಗಳಿಲ್ಲ"[11] ಎಂದು ಹೇಳುವುದು ಪಾವಿತ್ರ್ಯತೆಯನ್ನು ಕಾಪಾಡುವ ದೃಷ್ಟಿಯಲ್ಲಿಯೇ. ಮ್ಯಾಸಬೇಡರು ಬೇರೆಯಲ್ಲ ಊರುಬೇಡರು ಬೇರೆಯಲ್ಲ ಎಂದು ಬರೆಯುವ ಶಿವಣ್ಣನವರು ಊರುಗೊಲ್ಲರಿಗೂ ಕಾಡುಗೊಲ್ಲರಿಗೂ ಸಂಬಂಧವೆ ಇಲ್ಲವೆನ್ನುತ್ತಾರೆ. ಇದ್ದಕ್ಕಿದ್ದಂತೆ ಮ್ಯಾಸಬೇಡರು ಊರುಬೇಡರು ಕಾಡುಗೊಲ್ಲರು ಊರುಗೊಲ್ಲರು ಮೂಲತಃ ಒಂದೇ ಮೂಲದವರಿರಬೇಕೆಂದು ಎದ್ದು ನಿಲ್ಲುತ್ತಾರೆ.

"ಆಧ್ಯಾತ್ಮ ನೆಲೆಯಲ್ಲಿ ವಿಹಂಗಮ ವಿಹಾರ ಮಾಡುವ ವ್ಯಕ್ತಿತ್ವಗಳು ಅವರವಲ್ಲ. ಯಾವ ಆಧ್ಯಾತ್ಮವೂ ಗೊಲ್ಲತ್ತಿಲ್ಲದ ಬದುಕಿನ ವೇದಾಂತದ ಪಶುಪಾಲಕ ವೃತ್ತಿಯಲ್ಲಿ ಪರಮಾರ್ಥ ಕಂಡ ಮಣ್ಣಿನ ಜೀವಿಗಳ ಕತೆ ಇವಾಗಿವೆ. ಮಾದೇಶ್ವರ ಮಂಟೆಸ್ವಾಮಿಗಳಂತೆ ಇವರು ಶೈವೀಕರಣಗೊಳ್ಳದಿರಲು ಪ್ರಧಾನವಾದ ಕಾರಣವೆಂದರೆ, ಎತ್ತಪ್ಪ, ಜುಂಜಪ್ಪನವರು ಹಿಡಿದ ಹಾದಿ ಮತ್ತು ಪಶುಪಾಲಕ ವೃತ್ತಿ"[12] ಎನ್ನುವ ಶಿವಣ್ಣನವರೇ "ಜುಂಜಪ್ಪನನ್ನೂ ಒಬ್ಬ ಅಲೌಕಿಕ ವ್ಯಕ್ತಿಯಂತೆ ಚಿತ್ತಿಸುವುದಿಲ್ಲ. ನಾರು ಬೇರಿನ ವಿದ್ಯೆ ಕಲಿತ, ಹಾವು ಚೇಳಿನ ವಿಷ ಇಳಿಸುವ ಮಂತ್ರ ಕಲಿತ ಸಾಮಾನ್ಯ ವ್ಯಕ್ತಿಯಂತೆ ಚಿತ್ರಿಸುತ್ತಾನೆ"[13] ಎಂದು ಬೇರೆಯರ ಮೇಲೆ ಹರಿಹಾಯುತ್ತಾರೆ. ಮಾದೇಶ್ವರ ಮಂಟೆಸ್ವಾಮಿಗಳಂತೆ ಇವರು ಶೈವಿಕರಣಗೊಳ್ಳದಿರಲು ಪ್ರಧಾನವಾದ ಕಾರಣವೆಂದರೆ, ಎತ್ತಪ್ಪ, ಜುಂಜಪ್ಪನವರು ಹಿಡಿದ ಹಾದಿ ಮತ್ತು ಪಶುಪಾಲಕ ವೃತ್ತಿ ಎಂದು ಹೇಳುತ್ತಾರೆ. ಆದರೆ ಅವರೆ ಗೊಲ್ಲರು ಮೂಲತಃ ಶೈವಾರಾಧಕರು ಎಂದು ಇಡೀ ಪ್ರಬಂಧದ ತುಂಬಾ ಬರೆದುಕೊಂಡಿದ್ದಾರೆ. ಯಾಕೀ ವೈರುಧ್ಯ?. ವಿಶೇಷವೆಂದರೆ ಮತಾಂತರದ ಪ್ರಕ್ರಿಯೆಯಲ್ಲಿ ಗೊಲ್ಲರದು ಮುಂಚಾಗ. ಅದನ್ನು ಅವರ ಸಾಂಸ್ಕೃತಿಕ ನಡೆಗಳೆ ಹೇಳುತ್ತವೆ.

ಮಹಾಭಾರತದ ಕೃಷ್ಣನಿಗೂ ನಾವಿಂದು ಪೂಜಿಸುತ್ತಿರುವ ಕೃಷ್ಣನಿಗೂ ಯಾವುದೆ ಸಂಬಂಧಗಳಿಲ್ಲವೆಂದು ಅನೇಕ ವಿದ್ವಾಂಸರು ಆಧಾರ ಸಮೇತ ನಿರೂಪಿಸಿಯಾಗಿದೆ. ನಂತರದ ಕಾಲಮಾನಗಳಲ್ಲಿ 'ವೈಷ್ಣವೀಕರಣ' ಎನ್ನುವುದು ಬಂಡುಕೋರ ನೀತಿಯಲ್ಲಾದುದು ಸತ್ಯ. ಒಂದು ಕೂಡುಕಟ್ಟಿನ ಮೂಲಕಥನಗಳೊಂದಿಗೆ ಜೋಡಿಸುವ ಉಪಾಯಕ ಕೆಲಸ ಶುರುವಾಗಿಯೆ ಪಾಪಜ್ಜನ ಕಥನದಲ್ಲಿ ತಿರುಪತಿ ವೆಂಕಟರಮಣ ಸೇರಿದ್ದು. ವಾಸ್ತವವಾಗಿ ಬ್ರಾಹ್ಮಣ್ಯದ ಪ್ರತಿರೂಪವಾದ ವೆಂಕಟರಮಣನಿಗೂ ಬ್ರಾಹ್ಮಣ್ಯದ ಕಟುವಿರೋಧಿಯಾದ ಪಾಪಜ್ಜನಿಗೂ, ಅವರ ವಿಚಾರಗಳ ತಾತ್ವಿಕತೆಯಲ್ಲಿಯೇ ತೀಕ್ಷ್ಣವಾದ ವೈರುಧ್ಯವಿದೆ. (ಮೂಲದಲ್ಲಿ ತಿಮ್ಮಪ್ಪನೆಂಬ ನಾಗ ಕೂಡುಕಟ್ಟಿನ ವ್ಯಕ್ತಿಯನ್ನು ನಂತರ ವೆಂಕಟರಮಣ ಎಂದು ಬ್ರಾಹ್ಮಣ್ಯೀಕರಣಗೊಳಿಸಲಾಯಿತು. ಈಗಲೂ ತಿಮ್ಮಪ್ಪ ಎನ್ನುವ ಆತನ ಹೆಸರು ದ್ರಾವಿಡಮೂಲವನ್ನೇ ಹೇಳುತ್ತದೆ.) ಊಳಿಗಮಾನ್ಯ ವ್ಯವಸ್ಥೆಯನ್ನು ಸ್ಥಾಪಿಸುವ ಪ್ರತಿನಿಧಿಯಾದ ವೆಂಕಟರಮಣ ಹಾಗೂ ಪ್ರಭುತ್ವವನ್ನು ನಾಶಮಾಡಲೆಂದೆ ಜೀವಮಾನವನ್ನು ಸವೆಸಿದ ಪಾಪಜ್ಜ ವಿರುದ್ಧ ಧ್ರುವಗಳಾಗಿ ನಿಲ್ಲುತ್ತಾರೆ. ಕಥನದಲ್ಲಿ ಇಬ್ಬರಿಗೂ ಸಂಬಂಧ ಕಲ್ಪಿಸಿರುವುದು ಸೋಜಿಗ. ಮ್ಯಾಸಬೇಡರನ್ನೂ ವೈಷ್ಣವೀಕರಣ ಮಾಡಿಕೊಳ್ಳುವ ಪ್ರಕ್ರಿಯೆಯಾಗಿಯೇ ಇದು ಕಂಡುಬರುತ್ತದೆ. ಚಂಚುಲಕ್ಷ್ಮಿಯನ್ನು ನರಸಿಂಹಾವತಾರದೊಂದಿಗೆ ಗಂಟು ಹಾಕುವ ಕಥನವೂ ಭಿನ್ನ ಮಾದರಿಯದೇನಲ್ಲ.

ಹನೂರರು ಬರೆಯುವಂತೆ, ಬೇಡ ನಾಯಕರು ಕದಿರಿ ನರಸಿಂಹ ಮತ್ತು ಚುಂಚುಲಕ್ಷ್ಮಿಯನ್ನು ವಿವಾಹವಾದ ನಂತರ ಬೇಡರಿಗೆ ಎಲ್ಲಿಲ್ಲದ ಗೌರವ ಕೀರ್ತಿಗಳು ಲಭಿಸಿದವು ಎನ್ನುವುದು ಸಮಂಜಸವಲ್ಲ. ಕದಿರಿ, ಚುಂಚು ಎನ್ನುವ ಪದಗಳು ಕೂಡುಕಟ್ಟು ಮೂಲದವು. ಇವರ ವಿವಾಹ ನಂತರ ಬೇಡರಲ್ಲಿ ತಮ್ಮ ಮೂಲಸಂಸ್ಕೃತಿಗೆ ಪೆಟ್ಟು ಬಿದ್ದು ಮುಂದಿನ ಕಾಲದಲ್ಲಿ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸಲು ಗೊಂದಲಗಳು ಶುರುವಾದವು. ಇದೊಂದು ಮತಾಂತರದ ಪ್ರಕ್ರಿಯೆ. ಮಧ್ಯಕಾಲದಲ್ಲಾದ ಬದಲಾವಣೆಯೆ ಹೊರತು ಅದಕ್ಕಿಂತ ಹಿಂದೆ ಕಥನವಿರಲು ಸಾಕ್ಷ್ಯಗಳು ಕಡಿಮೆ. ಬೇಡರ ಮತ್ತು ಗೊಲ್ಲರ ಸಂಘರ್ಷಗಳಿಗೆ ಕಾರಣಗಳು ಸ್ಪಷ್ಟವಾಗದಿರುವುದು ಈ ಕಾರಣಕ್ಕಾಗಿಯೇ. ಅವೆರಡು ಸಮುದಾಯಗಳು ಒಂದು ಎನ್ನುವ ಮಾತಿಗೆ ಆಧಾರಗಳು ಕ್ಲೀಷೆಯೇ ಸರಿ. ಇವೆರಡು ಬುಡಕಟ್ಟುಗಳ ಸಂಘರ್ಷಕ್ಕೆ ಸಮುದಾಯಿಕ ಕಾರಣಗಳಿರದೆ ಧಾರ್ಮಿಕ ಕಾರಣಗಳು ಪ್ರಮುಖ ಪಾತ್ರ ವಹಿಸುತ್ತವೆ. ಪುರಾಣ ಪ್ರಸಿದ್ಧದಿಂದ ಕೃಷ್ಣನನ್ನು ಯಾದವರು ಆರಾಧಿಸುವ ಪ್ರಕ್ರಿಯೆ ಶುರುವಾದಾಗ ಗೊಲ್ಲರು ಮತ್ತು ಬೇಡರ ನಡುವಿನ ಕಂದಕ ಶುರುವಾಗುತ್ತದೆ. ತಮ್ಮ ಮೂಲ ನಾಗಜನಾಂಗದ ಕುರುಹುಗಳನ್ನು ಹಾಗೇ ಉಳಿಸಿಕೊಂಡು ಮುಂದುವರಿದ ಬೇಡರು ತಮ್ಮ ಕುಲವೈರಿಯಾದ ಕೃಷ್ಣನನ್ನು ಸಹಜವಾಗಿಯೇ ದೂರೀಕರಿಸಿದ್ದಾರೆ. ಆಚರಣೆಗಳಿಗೆ ಬಳಸುವ ಪರಿಕರಗಳಲ್ಲಿ ಈ ವ್ಯತ್ಯಾಸ ಸ್ಪಷ್ಟವಾಗುತ್ತದೆ. ಪಾಪನಾಯಕ ತಿರುಪತಿ ತಿಮ್ಮಪ್ಪನನ್ನು ಭೇಟಿಯಾಗುವ ಕಥನವು ಪ್ರಕ್ಷಿಪ್ತವಿರಬೇಕು ಇಲ್ಲವೇ ತಿಮ್ಮಪ್ಪನ ಬಗ್ಗೆ ಅಪಾರ ಗೌರವವಿರುವ ವ್ಯಕ್ತಿಯೇ ಇದನ್ನು ಸೃಷ್ಟಿಸಿರಲು ಸಾಧ್ಯ. ಕಥನದಲ್ಲಿ ಬರುವ ವೈರುಧ್ಯಗಳು ಈ ಅಭಿಪ್ರಾಯಕ್ಕೆ ಪುಷ್ಠಿ ನೀಡುತ್ತವೆ.

ಮ್ಯಾಸಬೇಡರ ಕೂಡುಕಟ್ಟನ್ನು ಛಿದ್ರಿಸಿರುವುದೂ ಮತಾಂತರದ ಪ್ರಕ್ರಿಯೆಯಾಗಿರಬಹುದು ಎಂಬುದಕ್ಕೆ ಅನೇಕ ಬುಡಕಟ್ಟುಗಳ ಆಚರಣೆಯ ಸಾಮ್ಯತೆ, ಕಥನಗಳ ತಾತ್ವಿಕತೆಗಳು ಒಂದಷ್ಟು ಮಾಹಿತಿಯನ್ನು ಒದಗಿಸುತ್ತವೆ. ಕಾಡುಗೊಲ್ಲರು, ಮಾದಿಗರು, ಮ್ಯಾಸಬೇಡರು, ಕುರುಬರು ಒಂದೇ ಮೂಲದವರು ಎಂಬುದನ್ನು ಸಾಕಷ್ಟು ಆಧಾರಗಳೊಂದಿಗೆ ವಿದ್ವಾಂಸರು ಸಾಬೀತುಪಡಿಸಿದ್ದಾರೆ. ಅವರ ಕಥನಗಳಲ್ಲೇ ಆಧಾರಗಳಿವೆ. ಹಾಗೆಯೇ ಛಿದ್ರತೆಗೆ ಕಾರಣಗಳೂ ಕಥನಗಳಲ್ಲಿ ಸಿಗಲು ಸಾಧ್ಯ. ಅಚ್ಚರಿಯ ಸಂಗತಿಯೆಂದರೆ ಮ್ಯಾಸಬೇಡರ ಕಥನಗಳಲ್ಲಿ ಗೊಲ್ಲರೊಂದಿಗೆ ಯಾವುದೇ ಸಂಘರ್ಷಗಳಿಲ್ಲ. ಒಂದು ಸನ್ನಿವೇಶದಲ್ಲಿ ಮಾತ್ರ ತಿರುಪತಿಗೆ ಹೋಗುವ ಗೊಲ್ಲರೊಂದಿಗೆ ಪಾಪಜ್ಜನ ಕಿಲಾಡಿತನ (ಪವಾಡ) ಕಾಣಿಸುತ್ತದೆ. ತಿಮ್ಮಪ್ಪನಿಗೆಂದು 'ಮೀಸಲು ಹಾಲು' ಹೊತ್ತೊಯ್ಯುವ ಗೊಲ್ಲರನ್ನು ಪಾಪಜ್ಜ ಕಾಡಿಸುತ್ತಾನೆ. ಮೀಸಲು ಹಾಲನ್ನು ತಾನೇ ಕುಡಿಯುತ್ತಾನೆ. ಬ್ರಾಹ್ಮಣ್ಯದ ಪರಿಭಾಷೆಯಲ್ಲಿ

[11] ಅದೇ. ಪುಟ.42

[12] ಅದೇ. ಪುಟ.544–545

[13] ಅದೇ. ಪುಟ.458

ಹೇಳುವುದಾದರೆ; ದೇವರಿಗೆ ಅರ್ಪಿಸಲೆಂದು ನಿರ್ಧಾರಿತವಾದ ಕ್ಷೀರವನ್ನು ಶೂದ್ರನೋರ್ವ ಮುಟ್ಟಿ ಅಪವಿತ್ರಗೊಳಿಸುತ್ತಾನೆ. ಈ ಸನ್ನಿವೇಶದ ಬಗ್ಗೆ ಬಹುಶಃ ಮ್ಯಾಸಬೇಡರ ಗೊಲ್ಲರ ಬಗ್ಗೆ ಮಣಬಾರದ ಪವಿತ್ರಗ್ರಂಥಗಳನ್ನು ಬರೆದ ವಿದ್ವಾಂಸರು ರಮ್ಯ ಕಥಾನಕದಂತೆಯೇ ಕಾಣುತ್ತಾರೆ. ಈ ಘಟನೆ ತನ್ನ ಒಡಲಲ್ಲಿ ಏನನ್ನು ಇರಿಸಿಕೊಂಡಿದೆ?

‘ಮೀಸಲು ಹಾಲು’ ಎನ್ನುವುದು ಪವಿತ್ರ ಎನ್ನುವುದನ್ನು ಸಾಧ್ಯಂತವಾಗಿ ಒಪ್ಪಿಕೊಂಡು ಮುಂದುವರಿಯೋಣ. ವೈದಿಕದ ಪರಿಭಾಷೆಯಲ್ಲಲ್ಲ. ಹಾಲು ಎನ್ನುವುದೂ ಜಲ ಎನ್ನುವ ಅರ್ಥದಲ್ಲಿಯೇ. ಒಂದು ಕೂಡುಕಟ್ಟು ತನ್ನ ಸಂಸ್ಕೃತಿಯ ಪ್ರತೀಕವೆನಿಸುವ ಸಂಕೇತವನ್ನು ಪವಿತ್ರವೆಂದು ಮೇಲ್ಮಟ್ಟ (ತಲೆ) ದಲ್ಲಿಟ್ಟುಕೊಂಡು ಕಾಪಾಡುತ್ತಾನೆ. ಈ ಹಿನ್ನೆಲೆಯಲ್ಲಿಯೇ ಇವರು ಜಲಸಂಸ್ಕೃತಿಯ ಪ್ರತಿಪಾದಕರೆಂದು ತಿಳಿಯುತ್ತದೆ. ವೈಷ್ಣವದಿಂದ ಪ್ರಭಾವಿತರಾದ ಗೊಲ್ಲರು ತಮ್ಮ ಕುಲಸಂಬಂಧಿ ಪವಿತ್ರ ವಸ್ತುವನ್ನು ಮತಾಂತರ ಹೊಂದುವ ಸಂದರ್ಭದಲ್ಲಿ ಮತಾಂತರ ಹೊಂದಬೇಕಾದ ಮತಕಾರನ ಅಡಿಗೆ ಅರ್ಪಿಸಿ ಹಿಂದಿನ ಸಂಸ್ಕೃತಿಯಿಂದ ಬಿಡುಗಡೆ (ನಾಶ) ವಾಗುವುದು. ಆ ಮೂಲಕ ಹೊಸ ಸಂಸ್ಕೃತಿ (ಮತ)ಯನ್ನು ಧಾರಣ ಮಾಡಿಕೊಳ್ಳುವುದು. ಗೊಲ್ಲರು ಹೊರಟಿರುವುದು ಸಾಂಸ್ಕೃತಿಕ ಮೇಲ್ಮುಖವಾದ ಜಾಡಿನಲ್ಲಿಯೇ. ಬೆಟ್ಟ ಗುಡ್ಡಗಾಡಿನಲ್ಲಿ ಕೆರಗಳಿಲ್ಲದೆ ಹೆಜ್ಜೆಯನ್ನೂ ಇಡಲಾರದ ಗೊಲ್ಲರು ತಿರುಪತಿಯವರೆಗೆ ಬರಿಗಾಲಲ್ಲಿ ನಡೆದುಹೋಗುತ್ತಿದ್ದಾರೆ ಎಂಬುದನ್ನು ಒತ್ತುಕೊಟ್ಟು ಗಮನಿಸಬೇಕು. ಒಟ್ಟಾರೆಯಾಗಿ ಆದಿಮ ಸಂಕೇತಗಳೆಲ್ಲವನ್ನೂ ತ್ಯಜಿಸಿ ತೆರಳುತ್ತಿದ್ದಾರೆ. “ಇಲ್ಲಿ ಜಗಲೂರಜ್ಜ ಹಾಲು ಮೊಸರು ತುಪ್ಪಗಳನ್ನು ಹೊತ್ತ ಗೊಲ್ಲರ ಸಮುದಾಯದ ಆಡಂಬರದ ಭಕ್ತಿಯನ್ನು ಕೆಣಕುತ್ತಾನೆ… ಸಾಮಾಜಿಕ ವಿಷಮತೆ ಮತ್ತು ಧಾರ್ಮಿಕ ಮೂಲಭೂತವಾದವನ್ನು ಪ್ರತಿಭಟಿಸಿದವರು ತಮ್ಮ ಬಲಿಷ್ಠ ಸಾಂಸ್ಕೃತಿಕ ಸ್ಮೃತಿಗಳಿಂದ ದಂಗೆಯ ದನಿಗಳನ್ನು ಹುರಿಗೊಳಿಸಿ”[14] ಮೂಲಭೂತವಾದವನ್ನು ತಾಂತ್ರಿಕ ಸ್ವರೂಪದಿಂದ ನಿವಾರಿಸಲೆತ್ನಿದ್ದಾನೆ. ಗೊಲ್ಲರ ಸಾಂಸ್ಕೃತಿಕ ವಿಸ್ಮೃತಿಗೆ ಒಳಪಡುವ ಪ್ರಕ್ರಿಯೆಯನ್ನು ಗಮನಿಸಿದ ಪಾಪಜ್ಜ ಮತಾಂತರವನ್ನು ತಪ್ಪಿಸುವ ಅಥವಾ ಮತಾಂತರ ಪ್ರಕ್ರಿಯೆಯ ವಿರುದ್ಧ ನೆಲೆಯಲ್ಲಿ ಕಾರ್ಯಾಚರಣೆ ಕೈಗೊಳ್ಳುತ್ತಾನೆ. ಅದಕ್ಕೆಂದೆ ಆಯ್ದುಕೊಂಡ ಕ್ರಮ ಮತಾಂತರ ಅಥವಾ ವೈದಿಕ್ಯ ಪವಿತ್ರವೆಂದು ಭಾವಿಸಿರುವುದನ್ನು ಅಪವಿತ್ರಗೊಳಿಸುವುದು. ಆ ಮೂಲಕ ಪ್ರಾದಿಮ ಎಲ್ಲೆಯಲ್ಲಿಯೇ ಉಳಿಸಿಕೊಳ್ಳುವುದು. ಬಹುಶಃ ಜನಪದ ಕಥನಗಳಲ್ಲಿ ಈ ಅಂಶವು ನೆಲಮೂಲ ಸಾಂಸ್ಕೃತಿಕ ಆಯಾಮದ ಗತತಾರ್ಕಿಕ ಸಾಪೇಕ್ಷಾ ಸಿದ್ಧಾಂತದ ಅಡಿಯಲ್ಲಿ ಅಮೂರ್ತವಾಗುಳಿಯುತ್ತದೆ.

ಚರಿತ್ರೆಯೆಂದರೆ ಎರಡು ಪ್ರಧಾನ ವಿಚಾರಧಾರೆಗಳು ತಮ್ಮ ಅಸ್ತಿತ್ವಕ್ಕಾಗಿ ನಡೆಸಿದ ಪ್ರಬಲ ವೈಚಾರಿಕ ಸಂಘರ್ಷವೆಂದು ಒಪ್ಪಬಹುದು. ಮ್ಯಾಸಬೇಡರಿಗೂ ಕಾಡುಗೊಲ್ಲರಿಗೂ ಸಂಘರ್ಷಗಳು ನಡೆಯುವುದಕ್ಕೆ ಸಂಶೋಧಕರು ಸರಿಯಾದ ಕಾರಣವನ್ನು ಚಾರಿತ್ರಿಕವಾಗಿ ಹುಡುಕುವುದು ಉತ್ತಮ. “ಮಧ್ಯ ಕರ್ನಾಟಕದ ಕಾಡಡವಿಯಲ್ಲಿ ಪ್ರಧಾನವಾಗಿ ಗೊಲ್ಲರು ಮತ್ತು ಮ್ಯಾಸಬೇಡರು ವಾಸಮಾಡಿದವರಾಗಿದ್ದು ಎರಡು ಬುಡಕಟ್ಟುಗಳಿಗೆ ಆಗಿಂದಾಗ್ಗೆ ಅನೇಕ ಹೋರಾಟಗಳು ಕಾದಾಟಗಳು ಬಡಿದಾಟಗಳು ಸಂಭವಿಸಿವೆ. ಗೊಲ್ಲರ ಬಹಳಷ್ಟು ಕಾವ್ಯಗಳಲ್ಲಿ ಎರಡೂ ಬುಡಕಟ್ಟುಗಳಿಗಾದ ಮುಖಾಮುಖಿಯನ್ನು ಇಲ್ಲಿ ಚರ್ಚೆಯ ಒರೆಗಲ್ಲಿಗೆ ಹಚ್ಚಲಾಗಿದೆ. ಬೇಡರ ತಲೆ ಹೊಡೆಯುವ ಪ್ರವೃತ್ತಿ ಅವರ ಹೆಣ್ಣುಗಳು ಲೈಂಗಿಕ ಹಸಿವು ಬೇಟೆಯ ದುರಾಸೆಗಳು ಸೂಕ್ಷ್ಮತೆಗಳನ್ನು ಎತ್ತಪ್ಪ ಹಾಗೂ ಇತರೆ ಈರಗಾರರ ಈ ಕಥನಗಳು”[15] ಎಂದು ತೇಲಿಸುತ್ತಾರೆ. ಇದು ಸಂಕಷ್ಟದ ಸ್ಥಿತಿಯ ಮತ್ತು ದುಂಡಾಗಿ ಗ್ರಹಿಸಿದ ಉದ್ದನೆಯ ಹೇಳಿಕೆಯಾಗುತ್ತದೆ.

ಮಧ್ಯಕಾಲೀನ ಕರ್ನಾಟಕ ಅಂಥ ಚಾರಿತ್ರಿಕಘಟ್ಟ. ಶಂಕರಾಚಾರ್ಯ ರಾಮಾನುಜಚಾರ್ಯ ಮತ್ತು ಮಧ್ವಾಚಾರ್ಯರು ತಮ್ಮ ವೈದಿಕಮೌಲ್ಯಗಳ ಪುನರುತ್ಥಾನಕ್ಕೆ ಪ್ರಯತ್ನಪಟ್ಟ ಸಂದರ್ಭಗಳಲ್ಲಿ ಅನೇಕ ದೇಸಿಪಂಥಗಳು ಕೂಡ ತಮ್ಮ ತಮ್ಮ ಪರಂಪರೆಯ ಉಳಿವಿಗಾಗಿ ಹೋರಾಟ ನಡೆಸುತ್ತಿದ್ದವು. ಈ ಸಂದರ್ಭದಲ್ಲಿಯೇ ಶೈವ ಮತ್ತು ವೈಷ್ಣವಪಂಥಗಳು ತಮ್ಮ ತಮ್ಮ ಜನಪ್ರಿಯತೆಗಾಗಿ ಅನೇಕ ಹೊಸ ಹೊಸ ಪಂಥಗಳನ್ನು ಹುಟ್ಟುಹಾಕಿದವು. ಇಂಥ ಮತಾಂತರಕ್ಕೆ ರಾಮಾನುಜಚಾರ್ಯರ ವೈಷ್ಣವೀಕರಣಕ್ಕೆ ಜನಸಮುದಾಯಗಳು ಒಳಗೊಳ್ಳಲು ಕಾರಣಗಳಿವೆ. ಬ್ರಾಹ್ಮಣ್ಯವು ಕುಲಗಳ ನೆಪದಲ್ಲಿ ಸಮಾಜವನ್ನು ವಿಭಜನೆ ಮಾಡಿತು. ಇದನ್ನು ವಿರೋಧಿಸಲು ಹೊಸ ಆಲೋಚನಾ ಧೋರಣೆಗಳು ಉದಯಿಸಿದವು. ಮಾನವ ಚರಿತ್ರೆಯಲ್ಲಿ ಎರಡು ವಿಧದ ಆಲೋಚನಾ ನೆಲೆಗಳು ಪರಸ್ಪರ ಸಂಘರ್ಷಿಸುತ್ತವೆ. ಒಂದು ಆಧ್ಯಾತ್ಮಿಕವಾದ, ಮತ್ತೊಂದು ಭೌತಿಕವಾದ. ಪ್ರಮುಖ ಬಿಟ್ಟಿದೇವನೆ ವೈಷ್ಣವದ ಪ್ರಭಾವಕ್ಕೆ ಒಳಗಾದ ನಂತರ ರಾಮಾನುಜನಿಗೆ ಈ ಪ್ರಕ್ರಿಯೆ ಸುಲಭವಾಗಿರಬೇಕು. ಆಂಧ್ರದ ಮೂಲದವರರಾದ ವಿಜಯನಗರದ ಅರಸರು ವೈಷ್ಣವರಾಗಿದ್ದು ತಿಮ್ಮಪ್ಪನ ಪರಮಭಕ್ತರಾಗಿದ್ದು ಇಡೀ ಕರ್ನಾಟಕದಲ್ಲಿ ಪ್ರಭಾವ ಬೀರಿದಾಗ ಕರ್ನಾಟಕದಲ್ಲಿ ಈ ಮತಾಂತರ ಪ್ರಕ್ರಿಯೆ ನಿರಾಂತಕವಾಗಿ ಸಾಗಿತು. “ಅನೇಕ ಕಾರಣಗಳಿಗಾಗಿ ಒಂದು ಧರ್ಮದ ಪಥದ, ಜನರು ಮತ್ತೊಂದು ಧರ್ಮವನ್ನು ಪಂಥವನ್ನು ಸ್ವೀಕರಿಸುವುದು ಮತ್ತು ಕಾಲಕ್ರಮದಲ್ಲಿ ತ್ಯಜಿಸಿ ಇನ್ನೊಂದು ಧರ್ಮವನ್ನು ಪಂಥವನ್ನು ಒಪ್ಪಿಕೊಳ್ಳುವುದು ಸಹಜವಾಗಿತ್ತು. ಆಗಾಗ್ಗೆ ನಡೆಯುತ್ತಿದ್ದ ಈ ಬಗೆಯ ಧರ್ಮಸಂಘರ್ಷ ಮತ್ತು ಧರ್ಮ ಪರಿವರ್ತನೆಯನ್ನು ಮೌಖಿಕ ಮಹಾಕಾವ್ಯಗಳು ಪ್ರಾಮಾಣಿಕವಾಗಿ ದಾಖಲಿಸುತ್ತವೆ”[16]. ದುರ್ಗದ ಅರಸರೂ ಇದಕ್ಕೆ ಸಾಕಷ್ಟು ಕೊಡುಗೆ ಕೊಟ್ಟಿದ್ದಾರೆ ಎನ್ನುವಲ್ಲಿ ಯಾವುದೇ ಅನುಮಾನವು ಉಳಿಯದು. ಚಾರಿತ್ರಿಕ ಒತ್ತಡ ಹಾಗೂ ಅನಿವಾರ್ಯ “ಸ್ವತಃ ವೈಯಕ್ತಿಕವಾಗಿ ಸಾಂಪ್ರದಾಯ ನಿಷ್ಠನಾಗಿದ್ದರ ಹೊರತಾಗಿಯೂ ಶಂಕರಾಚಾರ್ಯ ಹಲವಾರು ವೈಶ್ಯ, ಶೂದ್ರ ಮತ್ತು ಹರಿಜನರ ನಡುವೆ ಒಂದು ಮಾನ್ಯತೆಯ ಸ್ಥಾನ ಪಡೆದುಕೊಂಡ”(ಶಂಕರ ಮೊಕಾಶಿ ಪುಣೇಕರ.2011:16) ಸಂಸ್ಕೃತಿ ವಿಕಾಸದ ದೃಷ್ಟಿಯಿಂದ ಹೇಳುವುದಾದರೆ, ಶೈವ–ವೈಷ್ಣವ ಹಾಗೂ ವೀರಶೈವ ಸಂತರು ಮಧ್ಯಯುಗೀನ ಭಕ್ತಿ ಚಳುವಳಿಗಳ ಮೂಲಕ ದಕ್ಷಿಣ ಭಾರತದಲ್ಲಿ ಪ್ರಾದೇಶಿಕ ಸಂಸ್ಕೃತಿಗಳನ್ನು ಸಮೃದ್ಧಿಗೊಳಿಸಿದರು ಎಂದರೆ ಉತ್ಪ್ರೇಕ್ಷೆಯ ಮಾತಾಗದು. ಮಧ್ಯಕಾಲೀನ ಸಂದರ್ಭದಲ್ಲಿ “ಮುಸಲ್ಮಾನ ಒತ್ತಡದ ತಂತ್ರದಿಂದಾಗಿ ವನವಾಸಿಗಳು ಹಾಗೂ ಹಿಂದುಳಿದ ವರ್ಗಗಳ ಸಂಖ್ಯೆ ಹೆಚ್ಚುತ್ತಾ ಹೋಯಿತು. ಅವರ ಸಂಖ್ಯೆ ಹಾಗೂ ಪಂಗಡಗಳು ಹೆಚ್ಚುತ್ತಾ ಹೋಯಿತು. ಇಡೀ ದೇಶವನ್ನು ಮುಸ್ಲಿಂ ಆಳ್ವಿಕೆ ವ್ಯಾಪಿಸಿತು. ಅದಕ್ಕೆ ತಕ್ಕಂತೆ ಹಿಂದುಗಳ ವಿರೋಧವೂ ವ್ಯಾಪಕವಾಗಿತ್ತು. ದೇಶದಾದ್ಯಂತ ವಿಶಾಲ ಅರಣ್ಯಗಳಿದ್ದು ಅರಣ್ಯಗಳನ್ನು ಕೇಂದ್ರವಾಗಿಟ್ಟುಕೊಂಡು ಹೋರಾಟ ನಡೆಸುವುದೇ ಆಗ ಉಳಿದಿದ್ದ ಸುರಕ್ಷಿತ ಮಾರ್ಗ. ಹಾಗಾಗಿ ಪ್ರತೀ ರಾಜ್ಯದಲ್ಲೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಜನರು ಕಂಡು ಬರುತ್ತಾರೆ. ಮಧ್ಯಕಾಲೀನ ಅವಧಿಯಲ್ಲಿ

[14] ಪ್ರಭಾಕರ.ಎ.ಎಸ್. ಸಂ. ಮ್ಯಾಸಬೇಡರ ಕಥನಗಳು. 1999, ಪುಟ.08

[15] ಮಲ್ಲಿಕಾರ್ಜುನ ಕಲಮರಹಳ್ಳಿ, ಕರ್ನಾಟಕದ ಕಾಡುಗೊಲ್ಲರ ಜನಪದ ಕಾವ್ಯಗಳಲ್ಲಿ ಸಾಂಸ್ಕೃತಿಕ ಸಂಘರ್ಷ. ಪುಟ.05

[16] ಹಿರಿಯಣ್ಣ ಅಂಬಳಿಕೆ. 2014, ಪುಟ.111

ಶತಮಾನಗಳ ಕಾಲದ ದೌರ್ಜನ್ಯ ಹಾಗೂ ಸಂಘರ್ಷದ ನಡುವೆ ಅವರೆಲ್ಲಾ ದೀರ್ಘಕಾಲ ಕಾಡು ಹಳ್ಳಿಗಳಲ್ಲಿ ಕಟ್ಟಿಕೊಂಡ ಎಲೆಮನೆಗಳಲ್ಲಿ ಕಾಡು ಪ್ರಾಣಿಗಳಂತೆಯೆ ವಿಂಗಡಣೆಗೊಂಡು ಪ್ರತ್ಯೇಕವಾಗಿ ಜೀವನ ನಡೆಸಿದರು"(ವಸಂತನಾಯಕ್ ಪಲಿಮಾರ್ಕರ್. 2012:5).

ಮಧ್ಯಕಾಲೀನ ಚರಿತ್ರೆಗೆ ಒದಗಿ ಬಂದ ಸಂದರ್ಭಗಳು, ಚರಿತ್ರೆ ರೂಪಿಸಿದ ವಿಭಿನ್ನ ಆಯಾಮಗಳ ಸ್ವರೂಪ ನೇರವಾಗಿ ಮುಖಸ್ವಿಯಾಗಿದ್ದು ಬುಡಕಟ್ಟು ಜೀವನಕ್ರಮದ ಮೇಲೆ. ಕರ್ನಾಟಕದಲ್ಲಿ ಶುರುವಾದ ಪಾಳೆಪಟ್ಟುಗಳ ಅಸ್ತಿತ್ವ ಮತ್ತು ಅವನತಿ, ಮುಸ್ಲೀಮರ ದಾಳಿಗಳಿಂದಾದ ಹೊಡೆತಗಳು ಪ್ರಧಾನವಾಗಿ ಶೈವ–ವೈಷ್ಣವ, ದ್ವೈತ–ಅದ್ವೈತ ತತ್ವಗಳ ಸಂಘರ್ಷಗಳು ಕೂಡುಕಟ್ಟಿನ ಬದುಕಲ್ಲಿ ಸ್ಥಿತ್ಯಂತರಗಳನ್ನು ತಂದುದನ್ನು ಅಲ್ಲಗಳೆಯುವಂತಿಲ್ಲ. ಜೈನ, ಬ್ರಾಹ್ಮಣ, ಬುದ್ಧಧರ್ಮಗಳ ಸಂಘರ್ಷ ಮತ್ತು ಸಮನ್ವಯತೆಗಳಲ್ಲಿ ಸಿಲುಕಿ ಧಾರ್ಮಿಕವಾಗಿ ಹೇಗೋ ಕೊರೆಜೀವದಲ್ಲಿದ್ದ ಕೂಡುಕಟ್ಟುಗಳ ಮಧ್ಯೆಯೇ ಪ್ರಬಲವಾದ ಅಂತರವನ್ನು ತಂದಿದ್ದು ಮುಸ್ಲಿಂ ದಾಳಿಗಳೆಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಕಾರಣವಿಷ್ಟೆ, ಬುದ್ಧ ಧಮ್ಮದ ಅನುಯಾಯಿಗಳಾಗಿದ್ದ ಕೂಡುಕಟ್ಟಿನ (ಅಸ್ಪಷ್ಟ ವೈದಿಕ್ಯದ ಬೆರೆಕೆಯಿದ್ದರೂ) ಜನರು, ಮುಸ್ಲೀಮರ ದಾಳಿಯಿಂದಾಗಿ ಬೌದ್ಧಧಮ್ಮಕ್ಕೆ ಅಂತಿಮ ಹೊಡೆತ ಬಿದ್ದಾಗ ಕೂಡುಕಟ್ಟು ಸಹಜವಾಗಿ ಧಾರ್ಮಿಕವಾಗಿ ತಲ್ಲಣಗೊಂಡು ಅನಾಥವಾಗಿದೆ. ಬುದ್ಧಧಮ್ಮದ ವಿರುದ್ಧ ಯಾವಾಗಲೂ ಸಂಶಯಾತ್ಮಕ ವಿರೋಧಾತ್ಮಕ ದೃಷ್ಟಿಯನ್ನಿಟ್ಟುಕೊಂಡಿದ್ದ ಬ್ರಾಹ್ಮಣಧರ್ಮದ ಶಾಖೆಗಳಾದ ವೈಷ್ಣವ, ವೀರಶೈವಗಳು ಅನುಕೂಲಕ್ಕಾಗಿ ಕಾದಂತಿದ್ದು ಸಹಜವಾಗಿಯೇ ಅದನ್ನು ಯಶಸ್ವಿಯಾಗಿ ಬಳಸಿಕೊಂಡಿವೆ. ಶ್ರೀಮಂತಿಕೆಯನ್ನು ಬಿಟ್ಟು (ಜನರನ್ನು ಆಕರ್ಷಿಸಲು ಸುಲಭಮಾರ್ಗ) ದಾಸರಾಗಿ ಪರಿವರ್ತಿತರಾದ ವರ್ಗಗಳು ಅದ್ರಾವಿಡಧರ್ಮದ ಉಳಿವಿಗಾಗಿ ಟೊಂಕಕಟ್ಟಿ ನಿಂತರು. ಆರಾಧನೆಯು ಪೂಜೆಯಾಗಿ ಪರಿವರ್ತಿತವಾಗಿ ಜನರಲ್ಲಿ ದಾಸ್ಯತ್ವದ ಮನೋಭಾವವನ್ನು ಧಾರ್ಮಿಕವಾಗಿ ಬಿತ್ತಲಾಯಿತು.

ವೈಷ್ಣವಪಂಥವಂತೂ ಕೃಷ್ಣನ ಮತ್ತು ಆತನ ಪೂರ್ವಜ ವಿಷ್ಣುವನ್ನು ಮಾದರಿಯಾಗಿಟ್ಟುಕೊಂಡು ಸಾಂಸ್ಕೃತಿಕ (ವಾಸ್ತವವಾಗಿ ಧಾರ್ಮಿಕ) ಶ್ರೀಮಂತಿಕೆಯ ಹೆಸರಿನಲ್ಲಿ ಅನೇಕರನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಯಿತು. ಪಶುಪಾಲನೆ ಮಾಡಿಕೊಂಡಿದ್ದ ಕೂಡುಕಟ್ಟಿನ ಭಾಗವಾದ ಗೊಲ್ಲರಿಗೆ ಇದು ಸರಳವಾಯಿತು. ಇದಕ್ಕಾಗಿಯೆ ಕೃಷ್ಣನು ಪಶುಪಾಲಕನಂತೆಯು, ಬೆಣ್ಣೆ, ಮೊಸರು ಕದ್ದಂತೆಯೂ ತನ್ನ ಪಶುಗಳನ್ನು ಸಂರಕ್ಷಿಸಲು ಇಂದ್ರನ ಬದ್ಧ ವೈರಿಯಾಗಿ ಗೋವರ್ಧನಗಿರಿಯನ್ನು ಕಿರುಬೆರಳಲ್ಲಿ ಎತ್ತಿ ದನಗಳನ್ನು, ಗೋಪಾಲಕರನ್ನೂ ಸಂರಕ್ಷಿಸಿದಂತೆಯೂ ರಮ್ಯವಾದ ಕಥೆಗಳನ್ನು ಹೆಣೆಯಲಾಯಿತು. "ಪಂಚಾತ್ರಿಕವು (ಮೊಹೆಂಜದಾರೋದ ಮುದ್ರೆಗಳಲ್ಲಿ ಉಲ್ಲೇಖಿತ) ವಾಸುದೇವ ಕೃಷ್ಣನ ಪಂಥವನ್ನು ಆರಂಭಿಸಿತು. ಬಹುಶಃ ಆತನೊಬ್ಬ ನೇಕಾರನಾಗಿದ್ದು ಆತನ ತತ್ವದರ್ಶನವು ಪೂಜಾಕೇಂದ್ರಿತವಾಗಿದ್ದಿತು. ಅವನು ದ್ವಾರಕೆಯ ಕೃಷ್ಣನನ್ನು ಒಬ್ಬ ದೇವರನ್ನಾಗಿಸಿ ಅತ್ಯಂತ ರಮಣೀಯ ಮತ್ತು ವೈವಿಧ್ಯಮಯ ಪ್ರಭಾವಳಿಯನ್ನು ಬೆಳೆಸಿದನು. ಕೆಳಜಾತಿಗಳ ಜನ ವಿಶೇಷವಾಗಿ ಅಹಿರರು ಈ ಹೊಸ ಪಂಥವನ್ನು ಸ್ವೀಕರಿಸಿಕೊಂಡು ವೇದಗಳ ವಿಷ್ಣುವಿನೊಂದಿಗೆ ಗುರುತಿಸಿಕೊಂಡರು"(ವಸಂತನಾಯಕ್ ಪಲಿಮಾರ್ಕರ್.2012:79) ಅದರಿಂದಾಗಿ ಗೊಲ್ಲರಿಗೆ ಕೃಷ್ಣನೂ ನಮ್ಮವನ್ನೇ ಎಂಬ ಭ್ರಮೆಯನ್ನು ವೈಷ್ಣವಪಂಥ ನಾಜೂಕಾಗಿಯೇ ತುಂಬಿತು. ಸಾಂಸ್ಕೃತಿಕ ಹಿರಿಮೆಗೆಂಬಂತೆ ಗೊಲ್ಲರು ವೈಷ್ಣವರಾಗಲು ಹಿಂದುಮುಂದೂ ನೋಡಲಿಲ್ಲ. ಕೂಡುಕಟ್ಟಿನ ಇನ್ನೊಂದು ಭಾಗವಾದ ಮ್ಯಾಸಬೇಡರು ಆವರಣದಿಂದ ದೂರ ಉಳಿದರು. ನಾಥ, ಪಾಶುಪತ ತತ್ವಗಳಿಂದ ಪ್ರಭಾವಿತರಾಗಿ ಅನುಸರಣೆ ಮಾಡುತ್ತಾ ಮೂಲಸಂಸ್ಕೃತಿಯನ್ನು ಕಾಪಾಡಿಕೊಂಡಿದ್ದು ವೈಷ್ಣವಪಂಥಕ್ಕೆ ಮತಾಂತರವಾದರೆ ಅಸ್ಮಿತೆಗಳನ್ನು ನಿವಾರಣೆ ಮಾಡಿಕೊಳ್ಳುವ ಆತಂಕಕ್ಕೆ ಒಳಗಾಗಿ ಮತಾಂತರಕ್ಕೆ ಮುಖಾಮುಖಿಯಾದರು. "ಮತಾಂತರಕ್ಕಾಗಿ ಮುಸಲ್ಮಾನರು ಹೇರಿದ ಒತ್ತಡ ಹುನ್ನಾರಗಳನ್ನು ಶಾಕ್ತಮತದ ತಾಂತ್ರಿಕ ಆಚರಣೆಗಳು ಹಾಗೂ ಶಂಕರದೇವ ಮತ್ತು ಚೈತನ್ಯರಿಂದ ಉಂಟಾದ ಒಂದು ಭಕ್ತಿಯ ಪುನರುತ್ಥಾನವು ಸಮರ್ಥವಾಗಿ ಎದುರಿಸಿತು" (ಪ್ರಭಾಕರ. ಎ.ಎಸ್.1999:5–6). ಬಹುಶಃ ಸಮುದಾಯಗಳ ಪ್ರತ್ಯೇಕತೆ ಈ ನೆಲೆಯದು.

ಮ್ಯಾಸಬೇಡರಲ್ಲಿ ಸಿಗುವ ಕಥನಗಳು, ಆಚರಣೆಗಳು ಮೂಲಸಾಂಸ್ಕೃತಿಕ ಚಹರೆಗಳನ್ನು ಹೊತ್ತಿರುವುದು ಇದೇ ಕಾರಣಕ್ಕೆ. ತಿರುಪತಿಗೆ ಹಾಲು ಮೀಸಲು ಒಯ್ಯುವಾಗ ಜಗಲೂರಜ್ಜ ಬತಗೆಡಿಸುವುದನ್ನು ಇಂಥ ಚಾರಿತ್ರಿಕ ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕಿದೆ. ವೈಷ್ಣವವನ್ನು ಅಪ್ಪಿದ ಮ್ಯಾಸಬೇಡ ಪಾಳೆಗಾರರೂ ಅರಸರಾಗಿ ಆಳಿದ ನಿದರ್ಶನಗಳು ಮಧ್ಯಯುಗದಲ್ಲಿವೆ. ಮ್ಯಾಸಬೇಡ ಸಮುದಾಯ ನಂತರದ ಕಾಲದಲ್ಲಿ ವೈಷ್ಣವಪಂಥವನ್ನು ಒಪ್ಪಿರುವುದೂ ಸ್ಪಷ್ಟ. ಈ ಸಮಯದಲ್ಲಿ ರಾಮಾನುಜರ ಪ್ರಸ್ತಾಪ ನಮ್ಮ ವಾದಕ್ಕೆ ಬೆಂಬಲವಾಗಿ ನಿಲ್ಲುತ್ತದೆ. ಮಧ್ಯಯುಗದ "ಕರ್ನಾಟಕ ಚರಿತ್ರೆಯಲ್ಲಿ ರಾಮಾನುಜರಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ತಮಿಳುನಾಡಿನಿಂದ ಕರ್ನಾಟಕಕ್ಕೆ ಓಡಿಬಂದು ಶ್ರೀವೈಷ್ಣವ ಭಕ್ತಿ ಪರಂಪರೆಯನ್ನು ಇಲ್ಲಿ ವಿಭಿನ್ನ ಜಾತಿ ಸಮುದಾಯಗಳಲ್ಲಿ ಹರಡುವ ಕಾರ್ಯವನ್ನು ಇವರು ಮಾಡಿದರು. ದಕ್ಷಿಣ ಕರ್ನಾಟಕದ ಹಾಗೂ ಆಂಧ್ರದ ಅನೇಕ ಭಾಗಗಳಲ್ಲಿ ಕೆಳಜಾತಿ ಸಮುದಾಯದ ನಾಯಕ, ಬೇಡ, ಗೊಲ್ಲ, ರೆಡ್ಡಿ, ಒಕ್ಕಲಿಗ ವೃತ್ತಿ ಸಮುದಾಯಗಳು ಇದರಿಂದ ಶ್ರೀವೈಷ್ಣವ ಪ್ರಭಾವಕ್ಕೆ ಬರುವಂತಾದರು"(ಅದೇ.224). ಕಾಡುಗೊಲ್ಲರಿಗಾಗಲಿ ಮ್ಯಾಸಬೇಡರಿಗಾಗಲಿ ಈ ಪ್ರಕ್ರಿಯೆ ಅನಿವಾರ್ಯವೂ ಆಗಿತ್ತು. ಧಾರ್ಮಿಕ ಆಯಾಮದ ಆಚೆಗಿನ ಬದುಕು ಇಂಡಿಯಾದ ಮಟ್ಟಿಗೆ ಸಂದಿಗ್ಧವಾದದ್ದಾದ ಕಾರಣ ಇಂಥ ಘಟನೆಗಳು ಸಹಜವಾಗಿರುತ್ತವೆ. ಗೊಲ್ಲರು ಇದಕ್ಕೆ ಮೊದಲೇ ಸ್ಪಂದಿಸಿದರೆ ಮ್ಯಾಸಬೇಡರು ಅನಂತರ ಸ್ಪಂದಿಸಿದರು. ಜಗಲೂರಜ್ಜನ ಕಾವ್ಯ ಇದಕ್ಕೆ ಉತ್ತಮ ಉದಾಹರಣೆಯಾಗಿ ನಿಲ್ಲಬಲ್ಲದು.

ಏಕೀಕೃತ ಸಾರ್ವಭೌಮತ್ವಕ್ಕೆ ಒಳಪಡದೆ ಇರುವುದು ಕೂಡುಕಟ್ಟಿನ ಮಧ್ಯೆ ಬಿರುಕು ಬಂದು ಸಂಘರ್ಷಗಳು ನಡೆಯುತ್ತಲೆ ಇರುತ್ತವೆ. ಇದು ಯಾವುದೇ ಪ್ರಭುತ್ವಕ್ಕೂ ಅನಿವಾರ್ಯ ಕೂಡ. "ಬೌದ್ಧ ಮತ್ತು ಜೈನಪಂಥಗಳನ್ನು ನಾಸ್ತಿಕವಾದಗಳೆಂದು ಅನುಮಾನಿಸುತ್ತಿದ್ದುದರಿಂದಾಗಿ ಮಿಕ್ಕವು ಮಾತ್ರವೇ ದೈವವಾದಿ ಸಾಮೂಹಿಕ ನೆಲೆಯುಳ್ಳ ಪಂಥಗಳಾಗಿದ್ದವು. ಕೆಳಜಾತಿಗಳವರು ತಮ್ಮ ಪೂಜಾವಿಧಿಗಳನ್ನು ಸಂರಕ್ಷಿಸಿಕೊಳ್ಳಲಿಕ್ಕಾಗಿ ಅವರ ನಾಯಕತ್ವವನ್ನು ಒಪ್ಪಿಕೊಂಡರು. ಒಂದು ಹಂತದಲ್ಲಿ ಭಾರತವು ಬೌದ್ಧ ಮತ್ತು ಜೈನ ಕ್ರಾಂತಿಗಳ ಮೂಲಕ ಹಾಯುತ್ತಿದ್ದಾಗ, ಮತ್ತೊಂದು ಹಂತದಲ್ಲಿ ಮತ್ತೊಂದು ಮೌನಕ್ರಾಂತಿ ಎಂದರೆ ಕೆಳಜಾತಿಗಳ ಸಮ್ಮತಿಯೊಂದಿಗೆ ಹೊಸ ದೇವರುಗಳ ವೈದಿಕೀಕರಣವು ಸಂಭವಿಸುತ್ತಿತ್ತು. ಬ್ರಾಹ್ಮಣರು ಮಾನ್ಯಗೊಳಿಸುವಿಕೆಯ ಪ್ರಕ್ರಿಯೆಯೊಂದಿಗೆ ಶಿವ ಮತ್ತು ಕೃಷ್ಣರ ನಿತ್ಯ ಪೂಜೆಯನ್ನು ವೈದಿಕ ಮಂತ್ರೋಚ್ಚಾರಣೆಯೊಂದಿಗೆ ನಡೆಸುವ ವ್ಯವಸ್ಥೆಯನ್ನು ಬೆಳೆಸಿದರು. ಕೆಳಜಾತಿಗಳ ನಡುವೆ ಇದು ಅತ್ಯಂತ ವ್ಯಾಪಕವಾಗಿ ಪ್ರಚುರಗೊಂಡಿತು"(ಶಂಕರ ಮೊಕಾಶೆ

ಪುಣೇಕರ.2011:09). ಅಧಿಕಾಂಶ ಬ್ರಾಹ್ಮಣೇತರ ಪಂಗಡದ ಕ್ಷತ್ರಿಯ ಕುಲಕ್ಕೆ ಸೇರದ ಸೇನಾಪತಿಗಳು ತಮ್ಮ ಸ್ಥಾನದ ಸಿಂಧುತ್ವಕ್ಕಾಗಿ ಹಾತೊರೆಯುತ್ತಿದ್ದರು. ನಾಯಕ ಜನಾಂಗದವರಾಗಲೀ (ಮೂಲತ ಇವರು ಯೋಧರು ಮತ್ತು ಗೋಪಾಲಕರು) ಅಥವಾ ಯಾದವರಾಗಲೀ (ಕುರಿಗಾಯಿಗಳು) ಬ್ರಾಹ್ಮಣ ಆಚರಣೆಗಳ ಮೂಲಕ ಕ್ಷತ್ರಿಯರಾಗಿ ಆಳ್ವಿಕೆ ನಡೆಸಲು ಸಾಧ್ಯವಾಗಿತ್ತು. ಈ ಹೊಸ ಆಳುವ ವರ್ಗದ ಅರಸರ ಔದಾರ್ಯದಿಂದ ತಮ್ಮ ತಮ್ಮಲ್ಲೆ ಕದನಗಳಲ್ಲಿ ತೊಡಗಿರುತ್ತಿದ್ದ ಈ ವರ್ಗ ಪುರೋಹಿತಶಾಹಿಯ ಸಿಂಧುತ್ವದ ಮೂಲಕ ವಿಶಾಲವಾದ ಭೂಪ್ರದೇಶದ ಆಳ್ವಿಕೆಯನ್ನು ನಡೆಸುತ್ತಿತ್ತು. ಬೇರೆ ಬೇರೆ ಬ್ರಾಹ್ಮಣ ಸಮುದಾಯಗಳು ಸಬಲವಾಗುವಂತಾಯಿತಲ್ಲದೆ ದಕ್ಷಿಣ ಭಾರತದ ಚಕ್ರಾಧಿಪತ್ಯವಾದ ವಿಜಯನಗರದ ಪತನದ ನಂತರವೂ ಅವರ ಪ್ರಾಬಲ್ಯ ಮುಂದುವರಿಯಿತು.

ಅಜೀವಿಕ, ತಾಂತ್ರಿಕ ಪಂಥದವರು ಶಂಕರ, ಮಾಧ್ವ ಹಾಗೂ ರಾಮಾನುಜಚಾರ್ಯರ ವೈಷ್ಣವಪಂಥಗಳ ಸಂಘರ್ಷದಲ್ಲಿ ಪ್ರಭಾವ ಮತ್ತು ಆಚರಣೆಗಳಿಗನುಗುಣವಾಗಿ ಮತಾಂತರವಾದದ್ದು ಚಾರಿತ್ರಿಕ ಪಣಕಟ್ಟಿನ ಸಂಘರ್ಷಗಳ ನೆಲೆಯಲ್ಲಿ ವಿವರಿಸಿಕೊಳ್ಳಬೇಕಿದೆ. ನವಾಬರ ಬೇಡಿಕೆಗೆ ವಿರುದ್ಧವಾಗಿ ಡೆಲ್ಲಿಯಿಂದ ಬಂದ ಚಂದ್ರಮುತ್ತಿ ಮಾರಮುತ್ತಿಯವರೊಂದಿಗೆ ಒಂಬತ್ತು ಜಾತಿಗಳು ದಕ್ಷಿಣಕ್ಕೆ ಓಡಿಬಂದವು ಎಂದು ವಿದ್ವಾಂಸರು ಪ್ರಸ್ತಾಪಿಸುತ್ತಾರೆ. ಒಂಬತ್ತು ಜಾತಿಗಳೆಂದು ಭಾವಿಸದೆ ಪಣಕಟ್ಟೆಂದು ಗ್ರಹಿಸಿದರೆ ಕೂಡುಕಟ್ಟು ಸಾಂಸ್ಕೃತಿಕ ವೈಶಾಲ್ಯತೆ ಸಾಧ್ಯವಾಗುತ್ತದೆ. ವಿಶೇಷವೆಂದರೆ 'ಆ ಪಣಕಟ್ಟಿನಲ್ಲಿ ಗೊಲ್ಲರು ಮತ್ತು ಬೇಡರು ಎಡಗೈ ಪಣಕಟ್ಟಿಗೆ ಸೇರುತ್ತಾರೆ. ಅಂಥ ಸಂದರ್ಭದಲ್ಲಿ ಕ್ಷೀಣವಾಗುತ್ತಿದ್ದ ಆಜೀವಿಕ ನೆಲೆಯಿಂದ ಬೇರೆ ಧಾರ್ಮಿಕ ನೆಲೆಗಳಿಗೆ ಪಲ್ಲಟಗೊಳ್ಳವಾಗಿನ ಆಯ್ಕೆಯ ಕಾರಣಗಳನ್ನೂ ಈ ಮತಭೇದವೇ ನಿರ್ಧರಿಸಿದಂತಿದೆ"(ಲಕ್ಷ್ಮೀಪತಿ ಕೋಲಾರ. 1993:73). ಪಣಕಟ್ಟು ಸಮಾಜದ ಅಧ್ಯಯನಗಳು ವಿರಳವಾಗಿರುವ ಕಾರಣಕ್ಕೆ ಪ್ರಾದಿಮ ಸಮಾಜದ ಕೂಡುಕಟ್ಟಿನ ಸಾಂಸ್ಕೃತಿಕ ವಿಕಾಸದ ಬಗ್ಗೆ ನಮಗೆ ಸ್ಪಷ್ಟೀಕರಣ ದೊರೆಯುತ್ತಿಲ್ಲ. ಕುಲಚಿಹ್ನೆಗಳ ಅಧ್ಯಯನದಲ್ಲಿ ಇದನ್ನೊಂದು ಆದ್ಯತೆಯಾಗಿ ದುಡಿಸಿಕೊಂಡರೆ ಕೂಡುಕಟ್ಟಿನ ಪ್ರಾದಿಮ ಸ್ವರೂಪ ಸ್ಪಷ್ಟವಾಗುತ್ತದೆ. ಬೆಡಗುಗಳ ಮಧ್ಯೆ ಕಾಣುವ ಸಾಮ್ಯತೆಗಳು ಜೀವನಾವರ್ತನ ಆಚರಣೆಗಳು ನಮಗೆ ಪ್ರಬಲ ಆಧಾರಗಳಾಗಿ ನಿಲ್ಲಬಲ್ಲವು.

ಸಂಸ್ಕೃತಿಯ ವಿಕಾಸದ ನಡಿಗೆಯಲ್ಲಿ ಏಕಮುಖಿಯತೆ ಇರಲಾರದಾದ ಕಾರಣ ಅದಕ್ಕೆ ಒದಗಿದ ಸಂಘರ್ಷಗಳ ಮುಖಾಮುಖಿತ್ವವನ್ನು ಸರಳ ದುಂಡಾದ ಹೇಳಿಕೆಯಲ್ಲಿ ಹಿಡಿಯಲಾಗದು. ಯಾವುದನ್ನು ಪ್ರಧಾನ ಸಂಸ್ಕೃತಿಯೆಂದು ಸಂಸ್ಕೃತಿ ವ್ಯಾಖ್ಯಾನಕಾರರು ಕರೆದಿದ್ದಾರೋ ಅದೂ ಕೂಡ ಕೆಲವು ಭಾಗಗಳಲ್ಲಿ ತಳ ಸಂಸ್ಕೃತಿಯಷ್ಟೇ ವರ್ಜಿತಸ್ಥಾನದಲ್ಲಿ ನಿಂತಿರುತ್ತದೆ. ಅಸ್ಮಿತೆಯನ್ನು ಚಾರಿತ್ರಿಕ ಪಡಿಯಚ್ಚುಗಳಲ್ಲಿ ಉಳಿಸಿಕೊಂಡು ಬಂದ ಕೂಡುಕಟ್ಟು ಐತಿಹಾಸಿಕವಾಗಿ ಸಂಬಂಧಿಸಿದ ಸಂಘರ್ಷವನ್ನು ಎದುರಿಸಿದ ಇಬ್ಬಗೆಯ ಫಲಿತಾಂಶಗಳೂ ಸಮನ್ವಯ ದೃಷ್ಟಿಯಲ್ಲೂ ಅವುಗಳದೇ ಸಾಂಸ್ಕೃತಿಕ ಗುರುತನ್ನು ಜತನ ಹಾಗೂ ಗುಪ್ತವಾಗಿರಿಸಿಕೊಂಡಿವೆ. ಇವುಗಳನ್ನು ಶೋಧಿಸುವ ನಿಟ್ಟಿನಲ್ಲಿ ಅನೇಕ ಸ್ತರಗಳಲ್ಲಿ ಆಧಾರಗಳನ್ನು ವಿವಿಧ ಕ್ಷೇತ್ರಗಳಿಂದ ಕಲೆಹಾಕಬೇಕಿದೆ. ಪುರಾತತ್ವ ಶಾಸ್ತ್ರವೂ ಇಂಥ ವಿಶಿಷ್ಟ ಆಧಾರಗಳನ್ನು ಒದಗಿಸಬಲ್ಲದು. 'ಗತಜೀವನದ ಬದುಕಿನ ಆಧಾರಗಳು ಭೌತಿಕರೂಪದಲ್ಲಿ ಪುರಾತತ್ವ ಅವಶೇಷಗಳಲ್ಲಿ ದೊರೆಯುತ್ತವಾದರೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅವಶೇಷಗಳು ಸಮಾಜದ ಪದರ ಪದರಗಳಲ್ಲಿ ಭದ್ರವಾಗಿ ಸೇರಿಕೊಂಡಿದೆ. ಭಾರತೀಯ ಸಂಸ್ಕೃತಿಯಲ್ಲಿರುವ ಅಸಂಖ್ಯ ಭಿನ್ನ ವೈವಿಧ್ಯಗಳು ಅದನ್ನು ಇತರ ಸಂಸ್ಕೃತಿಗಳಿಗಿಂತ ಪ್ರತ್ಯೇಕವಾಗಿ ಭಾವಿಸುವಂತೆ ಮಾಡುತ್ತದೆ.

ಕಾಡುಗೊಲ್ಲರ ಕಥನಗಳಲ್ಲಿ ನಿರೂಪಿಸಲ್ಪಟ್ಟಿರುವಂತೆ ಕಾಡುಗೊಲ್ಲರಿಗೆ ಪ್ರಧಾನ ಶತ್ರುಗಳಾಗಿ ನಿಲ್ಲುವಂತವರು ಮ್ಯಾಸಬೇಡರು, ಮುಸ್ಲಿಮರು ಮತ್ತು ಕಂಬೇರುಗೊಲ್ಲರು. ಕಂಬೇರುಗೊಲ್ಲರದು ಕುಲದೊಳಗಿನ ಕಲಹವೆಂದು ಅಧ್ಯಯನಕಾರರು ಹೆಚ್ಚು ಒತ್ತು ಕೊಡದಿದ್ದರೂ ಅದಕ್ಕೆ ಪ್ರತ್ಯೇಕ ಅಧ್ಯಯನದ ಅಗತ್ಯತೆ ಇದೆಯೆಂಬುದನ್ನು ಮಲ್ಲಿಕಾರ್ಜುನ ಕಲಮರಹಳ್ಳಿಯವರು ಸರಿಯಾಗಿ ಗುರುತಿಸಿದ್ದಾರೆ. ಮೂಲ ಕೂಡುಕಟ್ಟಿನ ಸಹೋದರ ಸಂಬಂಧಿಯಾದ ಮ್ಯಾಸಬೇಡರು ಕಥನಗಳ ಕಾಲಕ್ಕಾಗಲೆ ಪ್ರಬಲ ವಿರೋಧಿಗಳಾಗಿ ಬೆಳೆದಿರಬೇಕು. ಇಲ್ಲವೇ ಪ್ರಬಲ ವಿರೋಧಿಗಳಂತೆ ನಿರೂಪಿಸುವ ಮೂಲಕ ಕಾಡುಗೊಲ್ಲರು ತಮ್ಮನ್ನು ಪ್ರತ್ಯೇಕವಾಗಿ ಗುರುತಿಸಿಕೊಳ್ಳಲು ಯತ್ನಿಸುತ್ತಿರಬೇಕು. ಈ ಕಾರಣಕ್ಕಾಗಿಯೇ ಇಲ್ಲಿ ಬರುವ ಪ್ರಶ್ನೆಯು ಮೇಲು ಕೀಳಿನದಾಗಿದೆ. ಎದುರು ಸಮುದಾಯವನ್ನು ಕೀಳೆಂದು ನಿರೂಪಿಸಿಲೆಂದೆ ಕೆಲವು ಕುಲಪುರಾಣಗಳನ್ನು ಸೃಷ್ಟಿಸಿ ಅದರ ತೇಜೋವಧೆಯನ್ನು ಮಾಡುವುದು. ಮಾದಿಗರಲ್ಲಿನ ಎಡಗೈ-ಬಲಗೈ ಪಣಕಟ್ಟುಗಳ ಸಮುದಾಯಗಳ ಕುಲಪುರಾಣಗಳು ಸಂಪೂರ್ಣ ಈ ನಿಟ್ಟಿನವೇ ಆಗಿವೆ. ಕಾಡುಗೊಲ್ಲರ ಪಾವಿತ್ರ್ಯತೆಯ ಭ್ರಮೆಯಲ್ಲಿ ಎದುರಾಗುವ ಮತ್ತೊಂದು ಸಮುದಾಯವೆಂದರೆ ಮುಸ್ಲಿಮರು. ಕಾಡುಗೊಲ್ಲರ ಕಥನಗಳಲ್ಲಿ ನಿರೂಪಿಸಿರುವಂತೆ ಮುಸ್ಲಿಮರ ದೌರ್ಜನ್ಯಗಳು ಕಾಡುಗೊಲ್ಲರ ಮೇಲೆ ಸತತವಾಗಿವೆ. ಭಾರತೀಯ ವ್ಯಾಪ್ತಿಯಲ್ಲಿಯೂ ಇದಕ್ಕೆ ಆಧಾರಗಳಿವೆ. ಆಹೀರರು ಮತ್ತು ಮುಸಲ್ಮಾನರ ಸಂಘರ್ಷವು ಪ್ರಸಿದ್ಧಿಯಾದುದೆ. ಆಹೀರರು ಮುಸಲ್ಮಾನರಿಗೆ ಪ್ರಬಲ ಸಂಘರ್ಷ ನೀಡಿದರೂ ನಂತರದ ದಿನಗಳಲ್ಲಿ ಸೋತು ಕಾಡು ಸೇರಿಕೊಂಡಿದ್ದು ಚರಿತ್ರೆಯ ಪುಟಗಳಲ್ಲಿದೆ. ಇಲ್ಲಿನ ಕಾಡುಗೊಲ್ಲರು ಮತ್ತು ಮುಸಲ್ಮಾನರ ನಡುವಿನ ಸಂಘರ್ಷಕ್ಕೆ ಭೌತಿಕ ಸ್ವರೂಪವಿರದೆ ಆಧ್ಯಾತ್ಮಿಕತೆಯ ಜಾಡಿನಲ್ಲಿ ಸಾಗುತ್ತದೆ. ಮುಸ್ಲಿಂ ದಾಳಿಯಿಂದಾದ ಅನರ್ಥಗಳನ್ನು ಚಿತ್ರಿಸುವಲ್ಲಿ ಅತಿಶಯೋಕ್ತಿಯೆನಿಸಿದರೂ ಆಗಿನ ಕಾಲದ ಅರಾಜಕತೆಯನ್ನಂತೂ ತಿಳಿಯಲು ಸಾಧ್ಯವಾಗುತ್ತದೆ. ವಿಚಿತ್ರವೆನಿಸುವಂತೆ; ಇದೇ ವ್ಯಾಪ್ತಿಯಲ್ಲಿ ಇರುವ ಮ್ಯಾಸಬೇಡರು ಮುಸ್ಲಿಮರೊಂದಿಗೆ ಸಂಘರ್ಷಕ್ಕೆ ಇಳಿದ ನಿದರ್ಶನಗಳು ಮ್ಯಾಸಬೇಡರ ಹಾಗೂ ಕಾಡುಗೊಲ್ಲರ ಕಥನಗಳಲ್ಲಿ ಇಲ್ಲವೇ ಇಲ್ಲ. ಮ್ಯಾಸಬೇಡರ ಯರಮಂಚಿನಾಯಕನ ಕುಲದವರು ದೆಹಲಿ ನವಾಬನೊಂದಿಗೆ ಯುದ್ಧಮಾಡಿ ಗೆದ್ದು 'ನನ್ನೆಮ್ಮ' ಎಂಬ ಮಹಿಳೆಯನ್ನು ತಂದು ಪಟ್ಟದ ರಾಣಿಯನ್ನಾಗಿಸಿಕೊಂಡದ್ದನ್ನು ಹೇಳಲಾಗುತ್ತದೆಯೇ ವಿನಃ ಕಥನಗಳಲ್ಲಿ ಚಿತ್ರಿತವಾಗಿಲ್ಲ.

ಇದರಿಂದ ನಮಗೆ ಅನೇಕ ಸುಳುಹುಗಳು ಸಿಗುತ್ತವೆ. ಚದುರಿದ ಕೂಡುಕಟ್ಟಿನಿಂದ ಸಿಡಿದ ಮ್ಯಾಸಬೇಡ ಸಮುದಾಯ ಮುಸ್ಲಿಮರೊಂದಿಗೆ ಮೈತ್ರಿ ಬೆಳೆಸಿಕೊಂಡರೇ? ಅಥವಾ ಅದ್ರಾವಿಡತ್ವವನ್ನು ವಿರೋಧಿಸುವಲ್ಲಿ ಅನೇಕರು ಮುಸ್ಲಿಮರಾಗಿ ಮತಾಂತರ ಹೊಂದಿದರೇ? ಇದನ್ನು ಸಡಿಲವಾಗಿ ತಿರಸ್ಕರಿಸುವಂತೆಯೂ ಇಲ್ಲ. ಯಾಕೆಂದರೆ ಭಾರತದಲ್ಲಿನ ಮುಸ್ಲಿಮರಲ್ಲಿ 95% ಕ್ಕೂ ಹೆಚ್ಚಿನವರು ಅಸ್ಪೃಶ್ಯವರ್ಗದವರೆಂದು ಅಂಬೇಡ್ಕರರು ಬರೆದಿದ್ದಾರೆ. ನನ್ನಿವಾಳದಲ್ಲಿ ಇರುವ ಮುಂಜಿಮ್ಯಾಸರು ಇದಕ್ಕೆ ಬಲವಾದ ಆಧಾರವನ್ನೊದಗಿಸಬಲ್ಲರು. ಈ ರೀತಿಯ ಸಂಕರಗಳಿಂದಲೆ ಸಾಂಸ್ಕೃತಿಕ ವಿಕಾಸ ಸಾಧ್ಯವಾಗುವುದು. ಮುಸ್ಲಿಮರಾಗಿ ಮಾದಿಗರೂ ಮತಾಂತರವಾದದ್ದು ಸತ್ಯ. ಗಮನಿಸಬೇಕಾದ ಸಂಗತಿಯೆಂದರೆ ಮಾದಿಗರೊಂದಿಗೆ ಮ್ಯಾಸಬೇಡರು ಸಹೋದರ ಬಾಂಧವ್ಯ ಹೊಂದಿದ್ದಾರೆ. ಆಚರಣೆಗಳು, ಬೆಡಗುಗಳು, ಕಥನಗಳಲ್ಲಿ

ಸಾಮ್ಯತೆಯನ್ನು ಹೊಂದಿದ್ದಾರೆ. ಮಾಸ್ತೀಕರ ಕುಲಪುರಾಣ ಮತ್ತು ಮ್ಯಾಸಬೇಡರು ಮತ್ತು ಗೊಲ್ಲರು ಬೇರೆಯಾದ ಕಥನಕ್ಕೂ ವ್ಯತ್ಯಾಸವಿಲ್ಲ. ಮಾದಿಗರು, ಮಾಸ್ತೀಕರು ಮತ್ತು ಮ್ಯಾಸಬೇಡರ ಮೂಲದೊಂದಿಗೆ ಘನಿಷ್ಠ ಸಂಬಂಧಗಳಿವೆ. ಮಾದಿಗರು ಮತ್ತು ಮ್ಯಾಸಬೇಡರಿಗೆ ಕಥನಗಳಲ್ಲಿ ಸಂಘರ್ಷಗಳಿಲ್ಲ. ಕುಮಾರರಾಮನ ಕಥನದಲ್ಲಿ ಮಾದಿಗನಾದ ಹಂಪ ಸೈನ್ಯದ ಮುಖಂಡನಾಗಿದ್ದು ಕುಮಾರರಾಮನಿಗೆ ಸಹೋದರನಾಗಿದ್ದಾನೆ. ತನ್ನ ಅಣ್ಣನಾದ ಕುಮಾರರಾಮನಿಗಾಗಿ ಪ್ರಾಣವನ್ನೇ ಕೊಡುತ್ತಾನೆ. ಪಾಪಜ್ಜ ಕುಲಗಳನ್ನು ಕೂಡಿಸುವಾಗ ಪ್ರಧಾನವಾಗಿ ಮಾದಿಗರನ್ನೂ ಸೇರಿಸಿಕೊಳ್ಳುತ್ತಾನೆ. ವಿಶೇಷವೆಂದರೆ ಪಾಪಜ್ಜನಿಗೆ ಹಾಲಿನಲ್ಲಿ ವಿಷವನ್ನಿಡುವುದು ಗೊಲ್ಲರೆಂಬುವುದನ್ನು ಶಿವಣ್ಣನವರು ಪ್ರಸ್ತಾಪಿಸುವುದಿಲ್ಲ. ಚಾರಿತ್ರಿಕವಾದ ಸಂಘರ್ಷಗಳನ್ನು ಇನ್ನು ಸಂಶೋಧಿಸಬೇಕಿದೆ. ಗೊಲ್ಲರ ಮತ್ತು ಮಾದಿಗರಿಗೆ ಸಂಘರ್ಷಗಳು ಮತ್ತು ಮಾದಿಗರನ್ನು ತುಚ್ಛವಾಗಿ ನಡೆಸಿಕೊಂಡ, ಮಾದಿಗ ಮುಟ್ಟಿದನೆಂಬ ಕಾರಣಕ್ಕೆ ಜೀವಬಿಟ್ಟ ಸಾಂಸ್ಕೃತಿಕ ನಾಯಕರು ಗೊಲ್ಲರಲ್ಲಿದ್ದಾರೆ. ಸ್ಪಷ್ಟವಾಗಿ ಗುರುತಿಸುವಂತೆ ಮುಸ್ಲಿಮರು, ಮಾದಿಗರು, ಮ್ಯಾಸಬೇಡರಲ್ಲಿ ಸಂಘರ್ಷಗಳಿರದೆ ಈ ಮೂವರೊಂದಿಗೂ ಕಾಡುಗೊಲ್ಲರು ಸಂಘರ್ಷವನ್ನು ಹೂಡಿದ್ದಾರೆ.

ಭಾರತೀಯ ಚರಿತ್ರೆಯು ಕೋಮುವಾದಿಗಳ ಕೈಗೆ ಸಿಕ್ಕು ನಂಬಿಕೆಗೆ ಅನರ್ಹವಾದ ಕಾರಣ ವಿಜಯನಗರ ಹಾಗೂ ಆದಿಲ್‌ಶಾಹಿಗಳ ಯುದ್ಧ ಮತ್ತು ವಿಜಯನಗರದ ಪತನದ ಕುರಿತ ಸಂಶಯಗಳು ಗಟ್ಟಿಯಾಗಿಯೇ ಉಳಿದಿವೆ. ಹೈದರಾಲಿ ಮತ್ತು ಚಿತ್ರದುರ್ಗದ ಯುದ್ಧವು ನಡೆದರೂ ಪಕ್ಕದ ನನ್ನಿವಾಳದಲ್ಲಿ ಬೇಡರ ಮತ್ತು ಮುಸ್ಲಿಂರ ಐಕ್ಯತೆ ಕಂಡುಬರುತ್ತದೆ. ಪೀರಲಹಬ್ಬವೂ ಸಮನ್ವಯತೆಯನ್ನು ಸಾರುತ್ತದೆ. ಮದಕರಿನಾಯಕನನ್ನು ಐಕಾನ್ ಆಗಿ ಬಳಸುವ ಸಮುದಾಯದಲ್ಲಿ ಮದಕರಿನಾಯಕನ ನೆನಪುಗಳು ಇವರ ಸ್ಮೃತಿಯಲ್ಲಿರುವುದಕ್ಕೆ ಆಧಾರಗಳಿಲ್ಲ. ಮೌಖಿಕರು ತಿಪ್ಪೇಸ್ವಾಮಿಯನ್ನು ತಮ್ಮೆದೆಗಳಲ್ಲಿ ಬಚ್ಚಿಟ್ಟುಕೊಂಡಿರುವುದು ಈ ಭಾಗದಲ್ಲಿ ಪ್ರಭುತ್ವದ ನಿರಂಕುಶತ್ವಕ್ಕಿಂತ ಸಾಂಸ್ಕೃತಿಕ ಸಾಮರಸ್ಯತೆಗೆ ಒತ್ತುಕೊಟ್ಟು ಪ್ರಭುತ್ವದ ಧಾಷ್ಟ್ಯವನ್ನು ದಾಟಿ ಬದುಕಿದರೆಂಬುದು ತಿಳಿಯುತ್ತದೆ. ಮುಸ್ಲೀಮರು ಕೂಡ ತಿಪ್ಪೇಸ್ವಾಮಿಯೊಂದಿಗೆ ತಮ್ಮ ಚಾರಿತ್ರಿಕ ಬಾಂಧವ್ಯವನ್ನು ಗುರುತಿಸಿಕೊಳ್ಳುತ್ತಿರುವುದು ಮೇಲಿನ ಹೇಳಿಕೆಗಳಿಗೆ ಘನಿಷ್ಠ ಆಧಾರವನ್ನು ಒದಗಿಸುತ್ತದೆ. ಮ್ಯಾಸಬೇಡರ ತಿಪ್ಪಯ್ಯ ತೇರಿಗೆ ಮೊದಲು ಪೂಜೆ ಸಲ್ಲಿಸುವವರು ಮಾದಿಗರು ಎಂಬುದನ್ನು ಮಾದಿಗರ ಮೌಖಿಕ ಪರಂಪರೆ ಹೇಳುತ್ತದೆ. 'ಈಗಲೂ ಮಾದಿಗರಿಂದ ನಾಯಕನಹಟ್ಟಿ ತಿಪ್ಪೇಸ್ವಾಮಿ ಜಾತ್ರೆ ಉಜ್ಜೈಯಿನಿ ತೇರಿಗೆ ಬಳ್ಳಾರಿ ತೇರಿಗೆ ಮೊದಲ ಪೂಜೆ ಸಲ್ಲಿಸುವ ಪದ್ಧತಿ ಇದೆಯೆಂದು ದೊಕ್ಕಲು ಮಕ್ಕಳು ಹೇಳುತ್ತಾರೆ'. ಕೊಟ್ಟೂರೇಶನ ತೇರಿಗೂ ಮೊದಲು ಮಾದಿಗರ ಹೆಣ್ಮಗಳು ಹಾಲು ಮೀಸಲು ನೀಡಬೇಕು. ಮಾದಿಗ ಕುಲಪುರಾಣಗಳು ಚಿತ್ರಿಸುವಂತೆ ಕುರುಬ, ಲಿಂಗಾಯತ, ಗೊಲ್ಲ, ಮ್ಯಾಸಬೇಡ, ಮಾದಿಗ ಸಮುದಾಯಗಳು ಮೂಲದಲ್ಲಿ ಒಂದೇ ಕೂಡುಕಟ್ಟಾಗಿತ್ತು.

ಮ್ಯಾಸಬೇಡರು ಮುಸಲ್ಮಾನರ ವಿರುದ್ಧ ಸಂಘರ್ಷವನ್ನು ಹೂಡಿಯೇ ಇಲ್ಲ ಎನ್ನುವಂತಿಲ್ಲ. ಅದನ್ನು ಕುರಿತ ಚಾರಿತ್ರಿಕ ಅಧ್ಯಯನಗಳು ಲಭ್ಯವಾಗಿಲ್ಲ. ನನ್ನ ಓದಿನ ಮಿತಿಯಲ್ಲಿ ಗುರುತಿಸುವುದಾದರೆ, ವಿಜಯನಗರದ ಅರಸರು ಆದಿಲ್‌ಶಾಹಿಗಳ ವಿರುದ್ಧ ಸೆಣಸುವುದಕ್ಕೂ ಸರಿಯಾದ ಆಧಾರಗಳು ದೊರಕಬೇಕಿದೆ. "ಮೊಗಲರು ರಾಣಾಪ್ರತಾಪಸಿಂಹನೊಂದಿಗೆ ಯುದ್ಧ ಸಾರಿ ಪರಾಭವಗೊಂಡಾಗ; ಬೇಡರ ಉಪಬೆಡಗಿನವರಾದ ವಿಶ್ವಾಸಿ ಬಿಲ್ಲರು ಆತನಿಗೆ ಯಾರೂ ಪತ್ತೆ ಮಾಡಲಾಗದ ಸ್ಥಳದಲ್ಲಿ ಇರಿಸಿ ಚಿಕಿತ್ಸೆ ನೀಡಿ ಪ್ರಾಣಾಪಾಯದಿಂದ ಪಾರು ಮಾಡಿದರು. ಮುಂದೆ ರಾಣಾ ಮೇವಾರವನ್ನು ಪುನಃ ಸ್ವಾಧೀನಪಡಿಸಿಕೊಂಡ. ರಾಣಾನಿಗೆ ಮತ್ತೆ ರಾಜ್ಯ ದೊರಕಿಸಿ ಮಾತೃಭೂಮಿ ಸ್ವಾತಂತ್ರ್ಯವಾಗುವವರೆಗೂ ತಟ್ಟೆಗಳಲ್ಲಿ ಊಟ ಮಾಡುವುದಿಲ್ಲ, ಹಾಸಿಗೆಗಳಲ್ಲಿ ಮಲಗುವುದಿಲ್ಲ ಎಂದು ಪಣತೊಟ್ಟು ರಜಪೂತ ಹಾಗೂ ಬಿಲ್ಲರು ಅದರಂತೆ ಎಲೆಗಳಲ್ಲಿ ಊಟ ಮಾಡಿ ನೆಲದಲ್ಲಿ ಮಲಗಿ ವ್ರತ ಆಚರಿಸಿ ಸ್ವಾತಂತ್ರ್ಯ ದೊರಕಿಸಿಕೊಟ್ಟರು"(ವಸಂತನಾಯಕ್ ಪಲಿಮಾರ್ಕರ್.:2012:79). ಹೈದರಾಲಿ ಮತ್ತು ಮದಕರಿನಾಯಕರ ಯುದ್ಧವನ್ನು ಚರಿತ್ರೆಕಾರರು ಮುಸ್ಲಿಂ ಮತ್ತು ನಾಯಕ ಜನಾಂಗದ ಯುದ್ಧವೆಂದು ಬರೆದರೂ ಮದಕರಿನಾಯಕನ ಸೈನ್ಯದಲ್ಲಿ ಮುಸ್ಲೀಮರು ಹೈದರನ ಸೈನ್ಯದ ವಿರುದ್ಧ ವೀರಾವೇಷದಿಂದ ಹೋರಾಡಿರುವುದನ್ನು ಕಡೆಗಣಿಸುವಂತಿಲ್ಲ. ಹಾಗೆಯೇ ಬ್ರಿಟೀಷರ ವಿಷಯಕ್ಕೆ ಬಂದಾಗ ಹಲಗಲಿಬೇಡರ ದಂಗೆ ಪ್ರಸಿದ್ಧಿಯಾದದ್ದು. ಸ್ವಾತಂತ್ರ್ಯದ ಸ್ವಾಭಿಮಾನದ ವಿಷಯಕ್ಕೆ ಬಂದಾಗ ಮುಸ್ಲಿಮರೊಡಗೂಡಿ ಬ್ರಿಟೀಷರ ವಿರುದ್ಧವೂ ಹೋರಾಡಿದ್ದಾರೆ. ಆದ ಕಾರಣ ಗೆರೆ ಕೊರೆದಷ್ಟು ಸರಳವಾಗಿ ಮೇಲಿನ ಸಮುದಾಯಗಳನ್ನು ಇಂಥವರ ಪರ ಎಂದು ಹೇಳಲಾಗದು. ಸಂಕರವಂತೂ ನಿಶ್ಚಿತವಾಗಿ ನಡೆದಿದೆ. ಚಿತ್ರದುರ್ಗದ ಕಾಳಗದಲ್ಲಿ ಮುಸ್ಲಿಮರು ಮುಸ್ಲಿಮರ ವಿರುದ್ಧ ನಾಯಕ ಜನಾಂಗದವರು ನಾಯಕ ಜನಾಂಗದವರ ವಿರುದ್ಧವೇ ಹೋರಾಡಿರುವುದು ಕಂಡುಬರುತ್ತದೆ. ಪ್ರಭುತ್ವನಿಷ್ಠತೆ ಇರುವಲ್ಲಿ ಹೀಗಾಗುವುದು ಸಹಜ.

ಬಲವಂತದಿಂದ ಮತ್ತು ಹಣದ ಅಧಿಕಾರದ ಆಮಿಷ ತೋರಿಸಿ ಮುಸ್ಲಿಮರು ಮತಾಂತರ ಮಾಡಿದರೆಂದು ಸನಾತನಿ ಚರಿತ್ರೆಕಾರರು ಬರೆಯುವಷ್ಟೇ ಧರ್ಮನಿಷ್ಠರಾಗಿ ಶಿವಣ್ಣನವರೂ ಬರೆಯುತ್ತಾರೆ. ಇವರಿಗೆ ಶಂಕರಾಚಾರ್ಯನ ಮತಾಂತರವು ಮತಾಂತರವಾಗಿ ಕಾಣುವುದೇ ಇಲ್ಲ. ಶೈವ ಆರಾಧಕರಾದ ಕಾಡುಗೊಲ್ಲರು ವೈಷ್ಣವಪಂಥಕ್ಕೆ ಮತಾಂತರ ಹೊಂದಲು ಹಣದ, ಅಧಿಕಾರದ, ಬಲವಂತದ ಪ್ರಯೋಗಗಳನ್ನು ಬಳಸಲಾಯಿತೇ? ಬಹುಶಃ ಇಲ್ಲ. ಮತಾಂತರವು ಸುಲಭವಾಗಿ ನಡೆಯುವಂತಹದೇನೂ ಅಲ್ಲ. ಕೂಡುಕಟ್ಟುಗಳಿಗೆ ಧರ್ಮದ ಪ್ರಜ್ಞೆಯಿಲ್ಲದಾಗ ಅಪ್ರಜ್ಞಾಪೂರ್ವಕವಾಗಿ ಎಲ್ಲವನ್ನೂ ಸಮನ್ವಯಗೊಳಿಸಿಕೊಂಡು ತಮಗರಿವಿಲ್ಲದಂತೆಯೇ ಧರ್ಮದ ಆವರಣಕ್ಕೆ ಬಂದು ಬಿಡುತ್ತವೆ. ಕೆಲವೊಮ್ಮೆ ವಿದೇಶಿಯರ ದಾಳಿಯಲ್ಲಿ ಸೋತು ಅಥವಾ ಎದುರುಗೊಳ್ಳಲು ಅದನ್ನು ಎದುರಿಸುತ್ತಿರುವ ಧರ್ಮದ ಒಳಗೆ ಆಶ್ರಯ ಪಡೆಯುವ ಸಾಧ್ಯತೆಗಳೂ ಇವೆ. ಬಹುಶಃ ಗೊಲ್ಲರನ್ನು ಈ ನಿಟ್ಟಿನಲ್ಲಿ ಗುರುತಿಸಬಹುದು. ಶಿವಣ್ಣನವರ ಅಸೂಕ್ಷ್ಮತೆ ಇಂಥ ಕಡೆಗಳಲ್ಲಿ ತಾನಾಗೆ ಬಹಿರಂಗಗೊಳ್ಳುತ್ತದೆ.

ಸಾಂಸ್ಕೃತಿಕ ಸಂಘರ್ಷಗಳು ಅನ್ಯಸಂಸ್ಕೃತಿಗಳೊಂದಿಗೆ ನಡೆದಿವೆಯೆಂದು ಭಾವಿಸಲಾಗದು. ಸಂಸ್ಕೃತಿಯೊಳಗಿನ ಸಂಘರ್ಷವೂ ಚಿತ್ರದುರ್ಗದ ಪ್ರಧಾನ ಬುಡಕಟ್ಟುಗಳೊಳಗೇ ನಡೆದಿದೆ. ಮ್ಯಾಸಬೇಡ, ಮಾದಿಗ, ಗೊಲ್ಲರ ಸಂಸ್ಕೃತಿಯೊಳಗಿನ ಸಂಘರ್ಷಗಳನ್ನು ಕಥನಗಳೇ ಸಾಧ್ಯಂತವಾಗಿ ಪ್ರತಿಪಾದಿಸುತ್ತವೆ. ಬುಡಕಟ್ಟುಗಳೊಳಗೆ ಕಂಡುಬರುವ ಹಲವು ಬೆಡಗುಗಳ ಹೆಚ್ಚುವಿಕೆಯೂ ಇನ್ನಷ್ಟು ಸ್ಪಷ್ಟವಾಗಿ ಗುರುತಿಸಲು ಸಾಕ್ಷ್ಯಗಳನ್ನು ಒದಗಿಸುತ್ತವೆ. ಸ್ವಲ್ಪ ಹೆಚ್ಚಾಯಿತೆನಿಸುವಷ್ಟು ಬರೆಯಿತಾದರೂ ಬೇಡರು ಮತ್ತು ಗೊಲ್ಲರ ಮಧ್ಯೆ ಇರುವ ಸಂಘರ್ಷಗಳಿಗೆ ಹಾದರವೇ ಕಾರಣವೆಂದು ವಾದಿಸುವ ವಿದ್ವಾಂಸರಿಗೆ ಮನವರಿಕೆ ಮಾಡಿಸಲೆಂದೆ ಇಷ್ಟೆಲ್ಲಾ ಹೇಳಬೇಕಾಯಿತು. ಮ್ಯಾಸಬೇಡರ ಸಂಸ್ಕೃತಿಯೇನೂ ಬ್ರಾಹ್ಮಣಧರ್ಮದಿಂದ ಹೊರಗುಳಿದಿಲ್ಲ. ಹನೂರರು, ವಿರುಪಾಕ್ಷಿ ಪೂಜಾರಹಳ್ಳಿ, ಮಂಜುನಾಥ ಬೇವಿನಕಟ್ಟೆ ಮುಂತಾದವರು ನಿರೂಪಿಸಿರುವ ಮ್ಯಾಸಬೇಡರ ಕುಲಕಥನಗಳು ವೈಷ್ಣವೀಕರಣಗೊಂಡವುಗಳಾಗಿವೆ. ಜಗಲೂರು ಪಾಪಜ್ಜನ ಅನೇಕ

ಪವಾಡಗಳು ಬ್ರಾಹ್ಮಣಧರ್ಮದ ಕೊಡುಗೆಗಳೇ. ಮ್ಯಾಸಬೇಡರ ಬಗ್ಗೆ ನಡೆದಿರುವ ಇದುವರೆಗಿನ ಅಧ್ಯಯನಗಳು ಮ್ಯಾಸಬೇಡರು ಆಗಲೇ ವೈಷ್ಣವೀಕರಣಗೊಂಡ ಹಂತದಿಂದ ಮ್ಯಾಸಬೇಡರ ಸಾಂಸ್ಕೃತಿಕ ಚರಿತ್ರೆಯನ್ನು ಗ್ರಹಿಸಿ ಅಧ್ಯಯನ ಮಾಡಿದ್ದಾರೆ.

ತಿರುಪತಿಯ ವೆಂಕಟರಮಣನ ದರ್ಶನಕ್ಕೆ ಪಾಪನಾಯಕ ಹೋದದ್ದು ಪ್ರಕ್ಷಿಪ್ತವೆಂದು ಹಿಂದೆಯೇ ಹೇಳಲಾಗಿದೆ. ಪಾಪನಾಯಕ ಆ ದರ್ಶನವನ್ನು ಹಂಬಲಿಸಿದವನಾಗಿರಲು ಸಾಧ್ಯವಿಲ್ಲ. ನಾಗಕುಲ ದ್ವೇಷಿಯಾದ ಕೃಷ್ಣನು ನಾಗಕುಲದ ವ್ಯಕ್ತಿಯ ಸಂಬಂಧ ಯಾವತ್ತೂ ವಿರೋಧಾತ್ಮಕವಾದುದು. ಇದು ಸ್ಪಷ್ಟವಾಗುವುದು ಪಾಪನಾಯಕನ ಕೊನೆಯ ಹಂತದಲ್ಲಿ ಪ್ರಭುತ್ವದ ಪ್ರತಿಪಾದಕನಾದ ವೆಂಕಟರಮಣನು ಹೆಣ್ಣಿನ ವೇಷ ಧರಿಸಿ ಹಿಂದಿನಿಂದ ಬಾಣ ಹೊಡೆದು ಪಾಪನಾಯಕನನ್ನು ಕೊಲ್ಲುತ್ತಾನೆ. "ಜಗಲೂರಜ್ಜ ವೆಂಕಟೇಶ್ವರನ ಭಕ್ತನಾದರೂ ವೆಂಕಟೇಶ್ವರನ ಸ್ಥಾಪಿತ ಪರಂಪರೆಯನ್ನು ಜ್ಞಾನದ ಬೆಳಕಿನಲ್ಲಿ ಪರೀಕ್ಷೆಗೀಡುಮಾಡುತ್ತಾನೆ. ವೆಂಕಟೇಶ್ವರನ ಭಕ್ತರ ಅವೈಚಾರಿಕ ಬೂಟಾಟಿಕೆಗಳನ್ನು ವಿಡಂಬಿಸುತ್ತಾನೆ. ಜಗಳೂರಜ್ಜನೆಂಬ ಅನುಭಾವಿ ತನ್ನ ಆಧ್ಯಾತ್ಮಿಕ ಪ್ರತಿಭೆಯಿಂದ ಪ್ರತಿಭಟಿಸುವ ಸಂದರ್ಭಗಳನ್ನು ಕಾಣಬಹುದು. ಮ್ಯಾಸಬೇಡರು ಜಗಳೂರಜ್ಜ ಮತ್ತು ವೆಂಕಟೇಶ್ವರನ ಮಧ್ಯೆ ವ್ಯತ್ಯಾಸಗಳನ್ನು ಕಲ್ಪಿಸಿಕೊಳ್ಳುವುದೇ ಇಲ್ಲ. ಆದರೂ ಜಗಳೂರಜ್ಜ ಗೋವಿಂದನ ವ್ಯಕ್ತಿತ್ವಕ್ಕೆ ವ್ಯತಿರಿಕ್ತವಾಗಿ ಬದುಕಿದವನು. ನಾಗರಬೆತ್ತ ಬಲಮುರಿ ಶಂಖಾಧಾರಿಯಾದ ಈತ ತಮ್ಮ ನಾಥಸಿದ್ಧರನ್ನು ನೆನಪಿಸುತ್ತಾನೆ"(ಪ್ರಭಾಕರ. ಎ. ಎಸ್. 1999:5-6).

ಜಗಳೂರಜ್ಜ ಜೀವಿತಾವಧಿಯ ಉದ್ದಕ್ಕೂ ಸಂಘರ್ಷಗಳಲ್ಲಿಯೇ ತೊಡಗುತ್ತಾನೆ. ಈತನ ಕಾಲಕ್ಕಾಗಲೇ ಪ್ರಭುತ್ವಶಾಹಿ ಬಲಗೊಂಡಿರುತ್ತದೆ. ಪಾಳೇಪಟ್ಟುಗಳು ಅಸ್ತಿತ್ವಕ್ಕೆ ಬಂದಿರುತ್ತವೆ. ಕಬ್ಬಿಣದ ಆಯುಧಗಳ ಬಳಕೆ ಪ್ರಾರಂಭವಾಗಿರುತ್ತದೆ. ಈತ ಸ್ಥಾಪಿಸುವ ಸೂರ್ಯನಂದನ ಕಠಾರಿ, ಸಿಡಿಲು, ಮಿಂಚಿನ ಕಠಾರಿಗಳು ಆಯುಧಗಳ ಬಳಕೆಯನ್ನು ಸೂಚಿಸುತ್ತವೆ ಎಂಬುದನ್ನು ಡಾ. ಎ. ಎಸ್. ಪ್ರಭಾಕರರು ಸರಿಯಾಗಿ ಗುರುತಿಸಿದ್ದಾರೆ. ರಾಜ ಅಧಿಕ ತೆರಿಗೆಯನ್ನು ಜನಸಾಮಾನ್ಯರ ಮೇಲೆ ಹೇರುತ್ತಿರುತ್ತಾನೆ. ಪುರೋಹಿತಶಾಹಿಯು ಮಂತ್ರಿಯ ಪಟ್ಟದಲ್ಲಿದ್ದು ರಾಜನನ್ನು ನಿಯಂತ್ರಿಸುತ್ತಿರುತ್ತದೆ. ಗೋನೂರು ಮತ್ತು ಜಗಳೂರು ಪ್ರಾಂತ್ಯದಲ್ಲಿ ಪ್ರಭುತ್ವದಿಂದಾಗಿ ಅಧಿಕ ತೆರಿಗೆ ಸಾಮಾನ್ಯನನ್ನು ಕಂಗೆಡಿಸುತ್ತದೆ. ಅಲ್ಲಿಗೆ ಜಗಳೂರಜ್ಜನ ಪ್ರವೇಶವಾಗುತ್ತದೆ. ಸಮುದಾಯದ ಪರವಾಗಿ ಜಗಳೂರಜ್ಜ ರಾಜನನ್ನು ತನ್ನ ಪವಾಡಗಳ ಮೂಲಕ ಸೋಲಿಸಿ ತೆರಿಗೆಯನ್ನು ರದ್ದುಪಡಿಸುತ್ತಾನೆ. ಆದರೆ "ಜಗಳೂರಿನ ರಾಜನ ದುಷ್ಟತನದ ವಿರುದ್ಧದ ಹೋರಾಟದಲ್ಲಿ ಮಾತ್ರ ಜಗಳೂರಜ್ಜ ಏಕಾಂಗಿಯಾಗಿ ಹೋರಾಡುತ್ತಾನೆ. ಇಡೀ ರಾಜ್ಯದ ಸೈನ್ಯವನ್ನು ಧ್ವಂಸ ಮಾಡುತ್ತಾನೆ. ಆಗ ತಿರುಪತಿಯ ವೆಂಕಟೇಶ್ವರನು ಸ್ತ್ರೀವೇಷದಲ್ಲಿ ಹಿಂದಿನಿಂದ ಬಂದು ಜಗಳೂರಜ್ಜನನ್ನು ಬಾಣ ಬಿಟ್ಟು ಕೊಲ್ಲುತ್ತಾನೆ. ಸಾಯುವಾಗ ಜಗಳೂರಜ್ಜ ನೀನು ಹೆಣ್ಣು ನಿನ್ನ ಮೇಲೆ ಯಾವುದೇ ಬಾಣಪ್ರಯೋಗ ಮಾಡೋದಿಲ್ಲ ಬದುಕ್ಕೋ ಹೋಗು ಎಂದ್ಹೇಳಿ ಪ್ರಾಣಬಿಡುತ್ತಾನೆ"(ಅದೇ.224). ಕ್ಯಾಸಪುರದ ಪಾಳೆಗಾರ ಪದಿಪಾಲಮ್ಮನನ್ನು ಅಪಹರಿಸಿ ಮದುವೆಯಾಗುತ್ತಾನಾದರೂ ಕೋರಮಲ್ಲಿನಾಯಕ ತನ್ನ ತಂಗಿಯನ್ನು ಅಪಹರಿಸಿದ ದೊರೆಯನ್ನು ಕ್ಷಮಿಸಿ ತಂಗಿ ಸುಖವಾಗಿದ್ದರೆ ಸಾಕೆಂದು ಹರಸಿ ಬರುತ್ತಾನೆ. ಈ ಪ್ರತಿಕ್ರಿಯೆ ಬೌದ್ಧಧರ್ಮದ ಆಶಯವೇ ಆಗಿದೆ. ತನ್ನ ಅತ್ತೆಯನ್ನು ಕರೆಯಿಸಿ ಮತ್ತೆ ಶಾಶ್ವತವಾಗಿ ತವರುಮನೆಯಲ್ಲೆ ಉಳಿಯುವಂತೆ ಮಾಡುವ ಕ್ರಮವು ಬಹುಶಃ ಸ್ತ್ರೀ-ಸಾಂಸ್ಕೃತಿಕ ಯಜಮಾನಿಕೆಯ ಆಳಿಯ ಸಂತಾನದಂತೆಯೇ ಕಾಣುತ್ತದೆ.

ಮನುಷ್ಯನ ಜ್ಞಾನ, ನಂಬಿಕೆ, ನೀತಿ ಕಾನೂನು ಸಂಪ್ರದಾಯಗಳಲ್ಲದೇ ಅವನು ಸಮಾಜದ ಸದಸ್ಯನಾಗಿ ಪಡೆದುಕೊಳ್ಳುವ ಸಾಮರ್ಥ್ಯಗಳೆಲ್ಲವೂ ಸಂಸ್ಕೃತಿಯಾಗಿ ರೂಪುಗೊಳ್ಳುತ್ತಿರುತ್ತವೆಂದು ಟೇಲರ್ ವ್ಯಾಖ್ಯಾನಿಸಿದ್ದಾನೆ. ಒಂದರ್ಥದಲ್ಲಿ ಜನಪದ ಸಂಸ್ಕೃತಿಯ ಒಟ್ಟಾರೆ ಜೀವನಕ್ರಮದಿಂದಲೆ ಸಮಾಜದ ಧಾರ್ಮಿಕತೆಯನ್ನು ನಿರಾಕರಿಸುವ ನೆಲೆಯಿಂದ ಚಿಗಿತುಕೊಳ್ಳುತ್ತೆ. ವೈರುಧ್ಯನೆಲೆಯಿಂದ ಆರಂಭಗೊಳ್ಳುವ ಆಚರಣಾಲೋಕವು ಸಾಂಸ್ಥಿಕತೆಯನ್ನು ಸಂಘರ್ಷ ನೆಲೆಯಲ್ಲಿ ಮುಖಾಮುಖಿಯಾಗದೆ, ಆಚರಣಾಕ್ರಿಯಾರೂಪದಲ್ಲಿಯೇ ವಿರುದ್ದ ತಾತ್ವಿಕನೆಲೆಗಟ್ಟೊಂದನ್ನು ಬಿಗಿಗೊಳಿಸಿಕೊಳ್ಳುತ್ತದೆ. ಆ ಕಾರಣಕ್ಕೆ ಆಚರಣಾ ಸಂಬಂಧಿ ಕಥನಗಳಲ್ಲಾಗಲೀ ಬುಡಕಟ್ಟು ಮಹಾಕಥನಗಳಲ್ಲಾಗಲೀ ಯುದ್ದಗಳು ದೊಡ್ಡ ಪ್ರಮಾಣದಲ್ಲಿ ಜರುಗುವುದಿಲ್ಲ. ತಾತ್ವಿಕತೆಯ ಸ್ಥಾಪನೆಗೆ ಯುದ್ದವು ಮಾರಣಾಂತಿಕವಾಗಿ ಮಾನವ ನಾಶವು ಆಗಬಹುದೆಂಬ ಅರಿವು ಅದರ ತಾತ್ವಿಕ ಪಾತಳಿಯಾಗಿದೆ. ಕಥನಗಳಲ್ಲಿ ಸೀಮಿತ ಯುದ್ಧ ಸನ್ನಿವೇಶದ ಹಿಂದೆಯೂ ಇಂಥ ಮನೋಭಾವವಿದೆ. ಧರ್ಮದ ರಕ್ತಪಿಪಾಸಿಯಂತೆ ಕಾಣುವುದೆ ಇಲ್ಲ. ಈ ಕಾರಣಕ್ಕೆ "ಜನಪದ ಧರ್ಮ ಅತಿಮಾನುಷ ಶಕ್ತಿಗಳ ಮೇಲೆ ಅವಲಂಬಿತವಾಗಿರುವುದಿಲ್ಲ. ಬದಲಿಗೆ ನಿಸರ್ಗದೊಡನೆ ನಡೆಸುವ ಹೋರಾಟದೊಡನೆ ಸಂಬಂಧ ಪಡೆದಿರುತ್ತದೆ. ನಿಸರ್ಗದೊಡನೆ ನಡೆಸುವ ಹೋರಾಟವೆಂದರೆ, ತಾನು ಬದುಕುಳಿಯಲು ಬೇಕಾಗಿರುವ ಅಹಾರ ಪದಾರ್ಥಗಳನ್ನು ಸಂಪಾದಿಸುವ ಮಾರ್ಗವಾಗಿದೆ. ಇದಕ್ಕಾಗಿ ಮಾನವ ಶ್ರಮಪಡಬೇಕಾಗುತ್ತದೆ. ಶ್ರಮ ಎಷ್ಟೆಷ್ಟು ಪ್ರಮಾಣದಲ್ಲಿ ವಿನಿಯೋಗವಾಗುತ್ತದೋ ಅಷ್ಟಷ್ಟು ಪ್ರಮಾಣದಲ್ಲಿ ಸಂಸ್ಕೃತಿ ರೂಪುಗೊಳ್ಳುತ್ತದೆ ಎಂದು ವೈಟ್ ಎಂಬ ವಿದ್ವಾಂಸ ಅಭಿಪ್ರಾಯ ಪಡುತ್ತಾನೆ. ಧರ್ಮವೂ ಸಂಸ್ಕೃತಿಯ ಭಾಗವಾಗಿರುವುದರಿಂದ ದುಡಿಮೆ ಅಥವಾ ಶ್ರಮದ ಮೇಲೆ ಧರ್ಮ ರೂಪುಗೊಳ್ಳುತ್ತದೆ"(ರಂಗಾರೆಡ್ಡಿ ಕೋಡಿರಾಂಪುರ. 2010:74).

ಸಾಂಸ್ಕೃತಿಕ ಅಧ್ಯಯನಗಳು ಅತಿಭಾವುಕವಾದಾಗ ಅಧ್ಯಯನಕಾರನು ಪೂರ್ವನಿಶ್ಚಿತಕ್ಕೆ ಬಂದು ಅದಕ್ಕೆ ಆಧಾರಗಳನ್ನು ಜೋಡಿಸುತ್ತಾ ಹೋದಾಗ ಸಮುದಾಯದ ಚಹರೆಯನ್ನೂ ಆರೋಪ ಮಾಡಿಕೊಳ್ಳುತ್ತಾನೆ. ಸಮುದಾಯದ ನಾಯಕನ ಗೆಲುವು ಆತನದೇ ಎಂಬಂತೆ ಬೀಗುತ್ತಾ ಸೋಲನ್ನು ಸಹಿಸಲಾರದಾಗುತ್ತಾನೆ. ಈ ಮಾತು ಶಿವಣ್ಣನವರಿಗೆ ಸೂಕ್ತವಾಗಿ ಅನ್ವಯವಾಗುತ್ತದೆ. "ಎತ್ತಪ್ಪ ಜುಂಜಪ್ಪನವರ ಅಂತ್ಯಗಳು ಅತ್ಯಂತ ದುರಂತಮಯವಾಗಿವೆ. ಎಳೆ ಹರೆಯದಲ್ಲೇ ವಿಷಪ್ರಾಶನಕ್ಕೆ ಗುರಿಯಾಗಿ ಜುಂಜಪ್ಪ ದುರ್ಮರಣಗೊಂಡರೆ, ಯಕಶ್ಚಿತ್ ಹೆಣ್ಣೊಬ್ಬಳ ಕಾಮಲಾಲಸೆಯ ಸೇಡಿಗೆ ಎತ್ತಪ್ಪ ಬಲಿಯಾಗಬೇಕಾಗುತ್ತದೆ. ಹೇಗೆ ಬಾಳಿದವರಿಗೆ ಎಂಥಾ ಸಾವು... ಈ ದುರಂತ ನಮ್ಮ ಮನ ಕಲಕುತ್ತದೆ"(ಶಿವಣ್ಣ ಮೀರಾಸಾಬಿಹಳ್ಳಿ. 2005:547) ಎನ್ನುವಲ್ಲಿ ಅವರ ಅಂತರಾಳ ಸ್ಪಷ್ಟವಾಗುತ್ತದೆ. ತನ್ನ ಸಂಸ್ಕೃತಿಯ ಸಮಾನ ಚಹರೆ ಬೇರೆ ಸಮುದಾಯದಲ್ಲಿ ಕಂಡರೆ ಅದರ ಮೂಲ ನಮ್ಮದು ಅದನ್ನು ನಾವೇ ಅವರಿಗೆ ಕೊಟ್ಟಿರಬಹುದೆಂದು ಆಧಾರಗಳಿಲ್ಲದೇ ತೀರ್ಮಾನಕ್ಕೆ ಬರುತ್ತಾನೆ. ಗೊಲ್ಲರಲ್ಲಿ ಕಿಲಾರಿ ಸಂಸ್ಕೃತಿ ಇಲ್ಲದಿರುವುದು ಮ್ಯಾಸಬೇಡರಲ್ಲಿ ಇರುವುದು ಶಿವಣ್ಣವರ ಕೊರಗಿಗೆ ಕಾರಣವಾಗಿದೆ. ಅದಕ್ಕವರ ವರಸೆ ನೋಡಿ, 'ಕಾಡುಗೊಲ್ಲರಲ್ಲಿ ಮಾತ್ರ ಇರಬೇಕಿದ್ದ ಕಿಲಾರಿ ಸಂಪ್ರದಾಯ ಇವರಲ್ಲೇ ಏಕೆ ಉಳಿದಿದೆ.' 'ಎತ್ತಿನ ಕಿಲಾರಿಯ ಪವಿತ್ರ ಕಾಯಕವನ್ನೇನಾದರೂ ಮ್ಯಾಸಬೇಡರಿಗೆ ಕಾಡುಗೊಲ್ಲರು ವಹಿಸಿಕೊಟ್ಟಿರಬಹುದೇ? ಎಂದು ಸವತಿ ಮತ್ಸರದ ಮಾತಾಡುತ್ತಾರೆ.

ಜುಂಜಪ್ಪ ಹಾಗೂ ಮಲೆಮಹಾದೇಶ್ವರ ಕಥನಗಳು ಸಂಕೇತಿಸುವ ಸಾಮಾಜಿಕ ವ್ಯವಸ್ಥೆಯು ಸಾಮಾನ್ಯವಾಗಿ ದುಡಿಮೆಯು ಕ್ರಮಾಗಿರದ

ಅಸಂಗಟಿತ ವಲಯದ ಕ್ರಮದಂತೆಯೂ ಪಶುಪಾಲನೆ ಮತ್ತು ಬೇಟೆಗಾರಿಕೆಯ ಆಧಾರದ ಮೇಲೆ ಬದುಕುತ್ತಿದ್ದ ಕಾಲವನ್ನು ಸೂಚಿಸುತ್ತವೆ. ರಾಜಕೀಯಾರ್ಥಿಕವಾಗಿ ನಾಗರಿಕ ವ್ಯವಸ್ಥೆಯನ್ನು ತಲುಪಿರುವ ಈ ಜನಸಮುದಾಯಗಳು ರಾಜ್ಯಾಧಿಕಾರ, ಆಡಳಿತದ ಉನ್ನತ ಸ್ಥಿತಿಯಲ್ಲಿದ್ದಾಗಲಿ, ಮಧ್ಯಕಾಲದಲ್ಲಿ ಯಾಕೆ ಈ ರೀತಿಯ ಕಥನಗಳನ್ನು ಕಟ್ಟಿಕೊಳ್ಳುತ್ತವೆ ಎಂಬುದು ಸೋಜಿಗವಾಗಬಹುದು. ಆಯುಧಗಳು ಅತ್ಯಾಧುನಿಕ ಸ್ಪರ್ಶವನ್ನು ಪಡೆದ ಸಂದರ್ಭದಲ್ಲಿಯೂ ಪಶುಪಾಲನೆ, ಬೇಟೆಗಾರಿಕೆಯ ಹಂತದಿಂದ ಕಲ್ಲಿನ, ಈಟಿಯ ಆಯುಧಗಳಿಂದ ಯಾಕೆ ಕಥನಗಳು ಆರಂಭವಾಗುತ್ತವೆ ಎಂಬ ಪ್ರಶ್ನೆ ಸಹಜವಾದುದೆ, ಇದು ರಾಷ್ಟ್ರೀಯತೆಯ ಅನಿವಾರ್ಯ ಕಾರಣವೆಂದು ಅನೇಕರು ಈಗಾಗಲೆ ಬರೆದಿದ್ದರೂ ನಾವು ಮತ್ತೊಂದು ದಿಕ್ಕಿನಿಂದ ಪ್ರವೇಶಿಸಬಹುದು. ಸಮಾಜ ವಿಜ್ಞಾನ ಮತ್ತು ಮಾನವಶಾಸ್ತ್ರೀಯ ನೆಲೆಯಿಂದ ಬರೋದಾದರೆ ಕಿರಾತಾವಸ್ಥೆ ಮಾತ್ರವೇ ಈ ಜನಸಮುದಾಯಗಳ ದೌರ್ಬಲಕ್ಕೆ ನವಚೈತನ್ಯವನ್ನು ತುಂಬುವ ಏಕಮಾತ್ರ ಸಾಮಾಜಿಕ ವ್ಯವಸ್ಥೆಯಾಗಿತ್ತು. ಸಾಂಸ್ಕೃತಿಕ ಬದುಕುಗಳು ಕೇವಲ ಅಸ್ಮಿತೆಯಾಗಿಯೂ ಸಾಮಾಜಿಕ, ರಾಜಕೀಯ ಉತ್ತುಂಗಕ್ಕೆ ಕೈ ಹಿಡಿಯುವ ಏಕಮಾತ್ರ ಮಾರ್ಗವಾಗಿತ್ತು. ಇಲ್ಲವಾದರೆ ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳ ಆಧುನಿಕ ಕಾಲಘಟ್ಟಗಳಲ್ಲಿಯೂ ಜನಸಮುದಾಯಗಳು ತಮ್ಮ ಕುಲಕಥನಗಳನ್ನು ಸೃಷ್ಠಿಯ ಆರಂಭದ ಮನುಷ್ಯನ ಸ್ಥಿತಿಯೊಂದಿಗೆ ಮರು ನಿರೂಪಿಸಿಕೊಳ್ಳುವ ದರ್ದು ಇರುತ್ತಿರಲಿಲ್ಲ.

ಶ್ರೀಯುತರ ಸಾಂಸ್ಕೃತಿಕ ಕೊಡುಗೆಗಳ ಬಗ್ಗೆ ಪ್ರಸ್ತಾಪಿಸಿ ಲೇಖನ ಮುಗಿಸೋಣ. 'ಮ್ಯಾಸಬೇಡರು ಮೂಲತಃ ಶೈವಾರಾಧಕ ಸಂಪ್ರದಾಯಕ್ಕೆ ಸೇರಿದವರಾದರೂ ವೈಷ್ಣವ ಪರವಾದ ಆರಾಧನೆಯೇ ಹೆಚ್ಚು ಪ್ರಮಾಣದಲ್ಲಿ ಇರುವಂತೆ ಕಾಣುತ್ತದೆ. ಬಹುಶಃ 'ಸಾಂಸ್ಕೃತಿಕ ಅಸಮತೋಲನ' ಮ್ಯಾಸಬೇಡರು ಕಾಡುಗೊಲ್ಲರಿಂದ ಬೇರೆಯಾದಾಗ ಉಂಟಾಗಿರಬಹುದು'. ಮೂಲತಃ ಶೈವರಾಗಿದ್ದ ಗೊಲ್ಲರು ವೈಷ್ಣವರಾದಾಗ ಅವರಲ್ಲಿ ಸಾಂಸ್ಕೃತಿಕ ಅಸಮತೋಲನ ಉಂಟಾಗಲಿಲ್ಲವೇ? 'ಮ್ಯಾಸಬೇಡರು ಮುಂಜಿ ಸಂಪ್ರದಾಯವನ್ನು ಅನುಸರಿಸಿದ್ದರಿಂದ 'ಸಾಂಸ್ಕೃತಿಕ ಶಿಥಿಲತೆ', ನಾಗರಿಕತೆಯ ಸತತ ದಾಳಿಯಿಂದ ಜನಾಂಗಗಳ ಮಧ್ಯೆ ಸಾಂಸ್ಕೃತಿಕ ಮಾಲಿನ್ಯ, ಸಾಂಸ್ಕೃತಿಕ ಕೊರತೆ, ಸಾಂಸ್ಕೃತಿಕ ಬಿಕ್ಕಟ್ಟು, ಸಾಂಸ್ಕೃತಿಕ ವೈಪರಿತ್ಯ, ಸಾಂಸ್ಕೃತಿಕ ಕುತೂಹಲ ಇಂಥ ಅರ್ಥವಿಲ್ಲದ ಅನೇಕ ಪದಗಳನ್ನು ವಿನಾ ಕಾರಣ ಬಳಸುವವರಿಗೆ ವಾಸ್ತವವಾಗಿ ಸಾಂಸ್ಕೃತಿಕ ಅರಿವೇ ಇರಲಾರದು. ಎರಡು ಸಮುದಾಯಗಳು ಒಂದಾದರೆ ಸಾಂಸ್ಕೃತಿಕ ಶ್ರೀಮಂತಿಕೆಗೆ ಕಾರಣವಾಗುತ್ತದೆಯೇ ವಿನಃ ಶಿಥಿಲವಾಗುವುದಿಲ್ಲ. ದುರಂತವೆಂದರೆ ಎಲ್ಲದರಲ್ಲೂ ಶಿವಣ್ಣನವರಿಗೆ ಪಾವಿತ್ರ್ಯತೆ ಬೇಕೇ ಬೇಕು.

ಶಿವಣ್ಣನವರ ಒಟ್ಟು ಸಂಶೋಧನೆಯನ್ನು ಗಮನಿಸಿದಾಗ ಅದರ ಒಟ್ಟು ತಿರುಳು ಸಿಕ್ಕಿದ್ದಿಷ್ಟು. ಅವರ ಪರಿಭಾಷೆಯಲ್ಲೆ ಹೇಳಬೇಕೆಂದರೆ, ಸಾಂಸ್ಕೃತಿಕ ಕುರುಡತನ ಇಂಥ ಅಧ್ಯಯನಗಳಲ್ಲಿ ಢಾಳಾಗಿ ಕಾಣುತ್ತದೆ. ನಾನು ಉದ್ಧರಿಸಿರುವ ಆಧಾರಗಳು ಅವರ ಥಿಸೀಸ್‌ನಲ್ಲಿಯೇ ಇರುವಂತಹವುಗಳೇ. ಅವುಗಳನ್ನು ಆಧಾರಸಮೇತ ವಿಶ್ಲೇಷಣೆ ಮಾಡಿದ್ದೇನಷ್ಟೆ. ಅತ್ಯಂತ ಸೂಕ್ಷ್ಮತೆಯಲ್ಲಿ ಆದ್ಯಂತವಾಗಿ ಬೆದಕಿದರೂ ಅದನ್ನೊಂದು ಸಾಂಸ್ಕೃತಿಕ ಸಂಶೋಧನಾ ಗ್ರಂಥ ಎಂದು ಕರೆಯಲು ಯೋಗ್ಯವಾದುದಲ್ಲ. ಇದಕ್ಕಿಂತ ಹೆಚ್ಚು ಹೇಳಿದರೆ ಕ್ಲೀಷೆಯೆಂದು ಮುಗಿಸುತ್ತೇನೆ. ಶಿವಣ್ಣನವರು ಬರೆದಂತೆಯೇ ಕಾಡುಗೊಲ್ಲರ ಮ್ಯಾಸಬೇಡರ ಎರಡು ಸಮುದಾಯಗಳ ಸಂಸ್ಕೃತಿ 'ಇಂಥಹುದು' ಎಂದು ನಂಬಿರುವವರು ಈ ಲೇಖನವನ್ನೊಮ್ಮೆ ಗಮನಿಸಬೇಕೆಂಬುದು ನನ್ನ ಕಳಕಳಿ. ಇಂಥವರ ಮಾರ್ಗದಲ್ಲಿಯೇ ಇಂದಿಗೂ ಎರಡು ಸಮುದಾಯಗಳ ಬಗ್ಗೆ ನಡೆಯುತ್ತಿರುವ ಸಂಶೋಧನೆಗಳು ಸಾಂಸ್ಕೃತಿಕ ಅಪವ್ಯಾಖ್ಯಾನವನ್ನು ಬಲಪಡಿಸುತ್ತಲೇ ಬಂದಿವೆ. ಮತ್ತೊಮ್ಮೆ ಹೇಳಲಿಚ್ಚಿಸುವುದೇನೆಂದರೆ, ಲೇಖನದಲ್ಲಿ ಶಿವಣ್ಣನವರು ನಿರೂಪಿಸಿರುವ ಜುಂಜಪ್ಪನನ್ನು ಮಾತ್ರ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಗೊಲ್ಲರು ನಂಬಿರುವ ಜುಂಜಪ್ಪ ಇದಕ್ಕಿಂತ ತುಂಬಾ ಭಿನ್ನವಾಗಿದ್ದು ಜನಪರ ನಿಲುವಿನವನೆಂದು ನಾನು ನಂಬಿದ್ದೇನೆ. ಸಿದ್ದಯ್ಯ ಕಂಬಾಳು ಅವರ 'ಜುಂಜಪ್ಪ' ನಾಟಕ, ಚೆಲುವರಾಜರು ಸಂಪಾದಿಸಿದ 'ಜುಂಜಪ್ಪನ ಕಾವ್ಯ' ಕರ್ನಾಟಕ ಜಾನಪದ ವಿಶ್ವವಿದ್ಯಾಲಯದವರು ಸಂಪಾದಿಸಿದ 'ಜುಂಜಪ್ಪನ ಕಾವ್ಯ' ಇತರೆ ಗಣೆಕಥೆಗಳು ನಿರೂಪಿಸುವ ಜುಂಜಪ್ಪ, ಶಂಕರನಾರಾಯಣರು ನಿರೂಪಿಸುವ ಜುಂಜಪ್ಪನ ವ್ಯಕ್ತಿತ್ವ ಇದಕ್ಕಿಂತ ಭಿನ್ನವಾಗಿದೆ.

**ಪರಾಮರ್ಶನ ಗ್ರಂಥಗಳು**


1. ಚೆಲುವರಾಜು. 2011, ಕನ್ನಡ ಜನಪದ ಮಹಾಕಾವ್ಯಗಳ ಪರ್ಯಾಯ ವಿವೇಚನೆ, ಪ್ರಕಾಶಕರು ನಾಗರತ್ನ ಹೆಚ್.ಎಸ್. ಶಿವಮೊಗ್ಗ.
2. ತಪಸ್ವೀ ಕುಮಾರ್. ನಂ. 2000, ಸಂಸ್ಕೃತಿ ವಿಕಾಸ, ಚೇತನ ಬುಕ್ ಹೌಸ್, ಮೈಸೂರು
3. ಪ್ರಭಾಕರ. ಎ.ಎಸ್. 1999.ಮ್ಯಾಸಬೇಡರ ಕಥನಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಬೋರಲಿಂಗಯ್ಯ. ಹಿ.ಚಿ. 2000, ಬುಡಕಟ್ಟು ದೈವಾರಾಧನೆ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ಹಂಪಿ.
5. ಮುತ್ತಯ್ಯ. ಎಸ್.ಎಂ. 2005, ಲಿಖಿತ ಅಲಿಖಿತ. ಸೃಷ್ಠಿ ಪ್ರಕಾಶನ. ಬೆಂಗಳೂರು.
6. ಮುತ್ತಯ್ಯ. ಎಸ್.ಎಂ. 2014, ಕಂಪಳ, ಸಿ.ವಿ.ಜಿ. ಇಂಡಿಯಾ. ಬೆಂಗಳೂರು.
7. ಮಂಜುನಾಥ ಬೇವಿನಕಟ್ಟೆ. 2007, ಕನ್ನಡ ಜನಪದ ನಂಬಿಕೆಗಳು, ಜ್ಯೋತಿ ಪ್ರಕಾಶನ, ಮೈಸೂರು.
8. ರಾಮಯ್ಯ ಕೋಟಗಾನಹಳ್ಳಿ. 1993, ಸಿಂದ್‌ಮಾದಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
9. ರಂಗಾರೆಡ್ಡಿ ಕೋಡಿರಾಂಪುರ. 2010, ಜನಪದ ಸಂಸ್ಕೃತಿ. ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು.
10. ಲಕ್ಷ್ಮೀಪತಿ ಕೋಲಾರ. 1993, ಮಾಸ್ತೀಕರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.
11. ಶಿವಣ್ಣ ಮೀರಸಾಬಿಹಳ್ಳಿ, 2005, ಕಾಡುಗೊಲ್ಲ ಬುಡಕಟ್ಟು ವೀರರು, ಸಿ.ವಿ.ಜಿ. ಪ್ರಕಾಶನ. ಬೆಂಗಳೂರು.
12. ಶಿವಣ್ಣ ಮೀರಾಸಾಬಿಹಳ್ಳಿ. 1999, ಗೊಲ್ಲಕಡಗ, ಸಿ.ವಿ.ಜಿ. ಪಬ್ಲಿಕೇಷನ್ಸ್. ಬೆಂಗಳೂರು.
13. ಶಿವಣ್ಣ ಮೀರಾಸಾಬಿಹಳ್ಳಿ. 1999, ದುರುಗ ಜಾನಪದ, ಶಕ್ತಿ ಪ್ರಕಾಶನ. ಬೆಂಗಳೂರು.
14. ಶಿವಾನಂದ ಕೆಳಗಿನಮನಿ.2009, ಮಾದಿಗ ಲಿಂಗಾಯತರು. ಶ್ರೀ.ಶಿರಡಿ ಸಾಯಿ ಎಂಟರ್ ಪ್ರೈಸಸ್. ಬೆಂಗಳೂರು.
15. ಹಿರೇಮಠ್. ಎಸ್.ಎಸ್. 1992. ಮಾದಾರ ಚನ್ನಯ್ಯನ ನಾಡಿನಲ್ಲಿ, ಸಮತಾ ಪ್ರಕಾಶನ. ಹರಪ್ಪನಹಳ್ಳಿ.
16. ಹಿರೇಮಠ್. ಎಸ್.ಎಸ್. 1992. ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ: ಹಬ್ಬಗಳು. ಸಮತಾ ಪ್ರಕಾಶನ. ಹರಪ್ಪನಹಳ್ಳಿ.
17. ಹಿರೇಮಠ್. ಎಸ್.ಎಸ್. 1993, ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ: ಜಾತ್ರೆಗಳು. ಸಮತಾ ಪ್ರಕಾಶನ. ಹೊಸಪೇಟೆ.

18. ಪುಟ್ಟಪ್ಪ. ಕೆ.ವಿ. 1970, ಪ್ರ. ಸಂ. ಯುಗಯಾತ್ರೀ ಭಾರತೀಯ ಸಂಸ್ಕೃತಿ. ಸಂಪುಟ.01. (ಮೂಲ. ಕಾಣೆ.ಪಿ.ವಿ.) ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು.
19. ಪುಟ್ಟಪ್ಪ. ಕೆ.ವಿ. 1971, ಪ್ರ. ಸಂ. ಯುಗಯಾತ್ರೀ ಭಾರತೀಯ ಸಂಸ್ಕೃತಿ. ಸಂಪುಟ.02. (ಮೂಲ. ಕಾಣೆ. ಪಿ.ವಿ.) ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು.
20. ಪ್ರಧಾನ್ ಗುರುದತ್ತ. 2004.ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, (ಮೂಲ. ಭಗವತ್ ಶರಣ ಉಪಾಧ್ಯಾಯ) ನವಕರ್ನಾಟಕ ಪ್ರಕಾಶನ, ಬೆಂಗಳೂರು.
21. ಶಾಮಭಟ್ಟ. ಟಿ.ಆರ್. 2015, ನೆನಪಿನ ಹಳ್ಳಿ, (ಮೂಲ. ಶ್ರೀನಿವಾಸ್.ಎಂ.ಎನ್.) ಐಬಿಎಚ್ ಪ್ರಕಾಶನ, ಬೆಂಗಳೂರು.
22. ಶ್ರೀಮತಿ. ಎಚ್.ಎಸ್. 2010, ಹೆಣ್ಣುತನ ಎಂಬ ಕಣ್ಕಟ್ಟು. (ಮೂಲ. ಬೆಟ್ಟಿ ಫ್ರೀಡನ್) ಪ್ರಗತಿ ಗ್ರಾಫಿಕ್ಸ್ ಬೆಂಗಳೂರು.
23. ಶ್ರೀಮತಿ. ಎಚ್.ಎಸ್. 2011, ದ ಸೆಕೆಂಡ್ ಸೆಕ್ಸ್. (ಮೂಲ. ಸಿಮೊನ್ ದ ಬೊವಾ) ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.
24. ಸೀತಾರಾಮಶಾಸ್ತ್ರಿ ಎನ್.ಎಸ್. 1957. ಕುಟುಂಬ ಸ್ವಂತ ಆಸ್ತಿ ಮತ್ತು ಪ್ರಭುತ್ವದ (ಮೂಲ. ಫ್ರೆಡ್ರಿಕ್ ಏಂಗೆಲ್ಸ್) ಜನಶಕ್ತಿ ಪ್ರಕಾಶನ. ಬೆಂಗಳೂರು.
25. Tony Joseph. 2018, Early Indians, Juggernaut books, New Delhi.
26. Tylor. E.B. 1871. Primitive Culture. John murray Albemarle street, London